ಗ್ರಾಹಕರಿಗೆ ಬಹುಮಾನ.

ಈ ಕಾವ್ಯರತ್ನಮಾಲಿಕೆಗೆ ಇದೇ ಬರುವ ಡಿಶಂಬರದ ಅಂತ್ಯದೊಳಗೆ ನಾಲ್ಕಾಣೆ ಪ್ರವೇಶ ಫೀ ಕೊಟ್ಟು ತಮ್ಮ ಹೆಸರನ್ನು ಹಚ್ಚಿಸಿ ನಮ್ಮ ಖಾಯಂ ಚಂದಾದಾರರಾದವರಿಗೆ ಈ ಕೆಳಗಿನ ಪುಸ್ತಕಗಳನ್ನು ಅರ್ಧ ಬೆಲೆಗೇ ಬಹುಮಾನವಾಗಿ ಕೊಡುವೆವು. ಪ್ರತಿ ಸ್ವಲ್ಪವೇ ಇದೆ. ತಡಮಾಡಿದರೆ ದೊರೆಯದು.

ಪುಸ್ತಕದ ಹೆಸರು.	ಅಂಚೆ ವೆಚ್ಚ ಬೇರೆ ರೂ. ಆ. ಪೈ
೧. ಕನ್ನಡ ಯೋಗ ವಾಸಿಷ್ಠ (ಭಾಮಿನಿ ಷಟ್ಪದಿಯಲ್ಲಿ ೨೬೦೦ ಪದ್ಯಗಳು ಇವೆ. ದಪ್ಪ ಕಾಗದ ಅಂದವಾದ ಮುದ್ರಣ)	೨—೮—೦
೨. ಜೀವ ಪರಮರ ಕಲ್ಯಾಣ.	೦—೪—೦
೩. ವಜ್ರ ದತ್ತನ ಕಾಳಗ.	೦—೪—೦
೪. ಗೀತ ಗೋವಿಂದ ಕಾವ್ಯ. (ಸಂಸ್ಕೃತ)	೦—೪—೦
೫. ಅವಧೂತ ಗೀತ. (ಮರಾಠಿ)	೦—೪—೦
೬. ಗುರು ಚರಿತ್ರೆ (ಮರಾಠಿ)	೦—೧—೦

N. B. ಆದಷ್ಟು ಬೇಗನೆ ಪರಶುರಾಮ ರಾಮಾಯಣವನ್ನು ಪ್ರಕಟಗೊಳಿಸಿ ಬಳಿಕ ಬೇರೆ ಕಾವ್ಯವನ್ನು ಮುದ್ರಿಸುವೆವು. ವಾಚಕರು ಆದಷ್ಟು ಚಂದಾದಾರರನ್ನು ಬೇಗನೆ ಕೂಡಿಸಿ ಕೊಡಬೇಕಾಗಿ ಪ್ರಾರ್ಥನೆ.

ಕರ್ಣಾಟಕಸುಕಾವ್ಯರತ್ನಮಾಲಾ.

ದ್ವಿತೀಯಮಣಿ

ಕನ್ನಡ ಪದ್ಯಾತ್ಮಕ

ಶ್ರೀಮದನಂತನ ಕಥಾ.

ಇದು

ವೆಂಕಪ್ಪಾ ಪರಮಯ್ಯಹೆಗ್ಗಡೆ ಕಡೇಕೋಡಿ.

ಇವರಿಂದ ಭಾಷಾಂತರಿಸಲ್ಪಟ್ಟು

ಕರ್ಣಾಟಕ ಸುಕಾವ್ಯರತ್ನಾಗಾರದಲ್ಲಿ ಪ್ರಕಟಿಸಲ್ಪಟ್ಟಿತು.

ಧಾರೇಶ್ವರ.

(ಹೊನ್ನಾವರ ಭಾರತೀ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು)

೫.

[ಬೆಲೆ ೦-೪-೪
ಅಂಚೆ ವೆಚ್ಚ ೦-೦-೬.

ಗ್ರಂಥಪರಿಚಯ:

ಶ್ರೀ ಮದನಂತ ಚತುರ್ದಶಿ ಕಥಾ ಎಂಬ ಸಾಮುಗ್ರೀಯನ್ನು ಪಡೆದು ವಿರಚಿತವಾದ ಪದ್ಯರೂಪದ ಈ ಕಥೆಯು ಬಹು ಸ್ವಾರಸ್ಯವಾಗಿಯೂ ಮನೋರಂಜಕವಾಗಿಯೂ ಇರುವದು. ಬಹು ಲಲಿತವಾದ ಶಬ್ದಗಳಿಂದ ಜೋಡಿಸಲ್ಪಟ್ಟ ಸುಲಭ ಶೈಲಿಯಿಂದ ರಚಿತವಾದ ಈ ಚಿಕ್ಕ ಪದ್ಯಗ್ರಂಥವು ಆ ಬಾಲವೃದ್ಧರ ಮತ್ತು ಭಗಿನೀ ಸಮಾಜದವರ ಉಪಯೋಗಕ್ಕೆ ತಕ್ಕದ್ದಾಗಿರುತ್ತದೆ. ಈ ಗ್ರಂಥವು ಪರಿವರ್ಧಿನಿ ಷಟ್ಪದಿಯಲ್ಲಿರುವದರಿಂದ ಕರ್ಣಾಟಕ ಮಹಿಳೆಯರಿಗೆ ಹಾಡಲಿಕ್ಕನುಗುಣವಾಗಿರುವದು ಗ್ರಂಥದ ವಿಶೇಷ ಲಕ್ಷಣವಾಗಿರುತ್ತದೆ. ಸದ್ಗುಣಿಗೆ ಮತ್ತು ದುರ್ಗುಣಿಗೆ ದೊರೆಯುತಕ್ಕ ಫಲಗಳ ವರ್ಣನೆಯು ಇದರಲ್ಲಿ ಅಡಕವಾಗಿರುತ್ತದೆ. ಕನ್ನಡಿಗರೇ ನೀವು ಈ ಪುಸ್ತಕವನ್ನು ಓದುವದರಿಂದ ಕನ್ನಡ ಭಾಷಾಸೇವಕರಾದ ಮ। ರಾ। **ವೆಂಕಪ್ಪ ಹೆಗ್ಗಡೆಯವರ** ಶ್ರಮವು ಸರಿಯಾದ ಪ್ರತಿಫಲವನ್ನು ಹೊಂದಿ ಗ್ರಂಥಕರ್ತರ ಮನಸ್ಸಂತೋಷಗೊಳಿಸಿ ಅವರಿಗೆ ಮತ್ತೂ ಹೊಸ ಗ್ರಂಥಗಳನ್ನು ರಚಿಸಲಿಕ್ಕೆ ಉತ್ಸಾಹ ಪ್ರಾಪ್ತಿಯಾಗುವದೆಂದು ನಾನು ದೃಢವಾಗಿ ನಂಬುತ್ತೇನೆ.

ಟಿ. ಎಸ್. ವೆಂಕಪ್ಪ.

ಬಿ. ಎ. ಎಲ್. ಎಲ್. ಬಿ.

ಶಿವಮೊಗ್ಗಾ.

* ಶ್ರೀ *

ಶ್ರೀ ಗೋಪಾಲ ಕೃಷ್ಣಾಯ ನಮಃ

ಶ್ರೀ ಮದನಂತನ ಕಥಾರಂಭ.

ಪರಿವರ್ಧಿನಿ ಷಟ್ಪದಿ

(೧) ಶ್ರೀಗೋಪಾಲನು ಕೃಷ್ಣಾನಂತನು ।
ಭೋಗೀಶಯನನು ಕಮಲದಲಾಕ್ಷನು ।
ಯೋಗೀಶರು ಬಿಡದೆಸಗುವ ಜ್ಞಾನಕಗೋಚರನಾದವನು ॥
ಭಾಗೀರಥಿಯುಂಗುಷ್ಠದೆ ಪಡೆದಾ ।
ಯೋಗಾರೂಢನು ಸುಜನೋದ್ಧಾರನು ।
ಆಗೀಗೆನ್ನದೆ ಭಕ್ತರ ಪೊರೆವಾದೇವನು ರಕ್ಷಿಸಲಿ ॥

(೨) ತಾವರೆ ವನೆಯಲಿ ವಾಸವನೆಸಗುತೆ ।
ತಾವರೆಯೆರಡನ್ನಾಟಕೆ ತನ್ನಯ ।
ತಾವರೆಗೈಗಳೊಳಾಂತಾನಂದದೊಳತುಳೈಶ್ವರ್ಯವನು ॥
ಭೂವಲಯದೆ ಭಕ್ತಾವಳಿಗೀಯುತೆ ।
ತಾವರೆಗಣ್ಣನ ತಾವರೆಯಡಿಗಳ ।
ಸೇವಿಸುತಿಪ್ಪ ಮಹಾಲಕ್ಷ್ಮಿಯು ಸತ್ಕರುಣದೆ ರಕ್ಷಿಸಲಿ ॥

(೩) ಮಾವಗಿರೀಶನು ತನಯಗಣೇಶನು ।
ಭಾವಿಸೆ ಸಖನುಧನೇಶ ಚತುರ್ದಶ ।
ಭೂವಲಯಗಳ ಸದಾರಕ್ಷಿಸುವ ಮಹೇಶನು ತಾನಾಗಿ ॥

ಠಾವನು ವಾಸಕ್ಕೆಸಗುತೆ ಮಸಣವ ।
ಹಾವುಗಳೊಡವೆಯು ಕೂರ್ಮೆಯೊಳಾಂತಾ ।
ದೇವನು ಗಂಗಾಧರ ಗಿರಿಜೇಶನು ಕರುಣದೆ ರಕ್ಷಿಸಲಿ ॥

(೪) ಸುರರಮಣೀಚಯು ಕಬರೀ ಭರಸುರು- ।
ಚಿರ ಕಾಳಿಂದೀಸ್ಫುರಿತ ಪದಾಂಬುಜೆ ।
ಗಿರಿರಾಜೇಂದ್ರಾತ್ಮಜೆ ಸತ್ಕರುಣಾಮೃತದ ತರಂಗಿಣಿಯೇ ॥
ಉರಗಾರಿಯುವಾಹನಸಖನರಸಿಯೆ ।
ಕರಿರಾಣ್ಮುಖ ಷಣ್ಮುಖ ಮಾತೆಯೆ ಶಂ ।
ಕರಿಸುಗುಣಾಭರಣೆಯೆ ಕಡೆಗಣಿಸದೆ ಪೊರೆಯನುದಿನತಾಯೆ ॥

(೫) ಹೊಕ್ಕುಳ ಹೂವಿನೊಳುದಿಸುತೆ ಲೋಕವ ।
ಮಕ್ಕಳಾಟದೋಲ್ ಸೃಜಿಸುತೆ ಕಾಲಕೆ ।
ತಕ್ಕ ತಕ್ಕುಪಾಯುಗಳನು ತಪ್ಪದೆ ಗಂಟಿಕ್ಕುತೆ ಕೈಗೆ ॥
ಸಿಕ್ಕದೆ ಸಿಕ್ಕುವ ತೆರದಲಿ ನಟಿಸುತೆ ।
ಠಕ್ಕಿಸುತಿಹ ಚತುರಾನನನಡಿಗಳಿ ।
ಗುಕ್ಕಟ ಬಕುತಿಯೊಳೆರಗುತೆ ಬೇಡುವೆ ರಕ್ಷಿಸಲನವರತ ॥

(೬) ವಾರಿಜೋದ್ಭವನ ಕೂರ್ಮೆಯರಸಿವಾ ।
ಗ್ವಾರಿಧಿಯಾರೇಳೂ ಲೋಕದೊಳಗೆ ।
ವಿಾರಿದ ಸೇವೆಯುಗೊಂಬಳೆ ವರದಾಯಕಿ ಕಾಳಹಿವೇಣಿ ॥
ಭೂರಿಗುಣಾಢ್ಯಳೆ ಭಕ್ತೋದ್ಧಾರಳೆ ।
ಶಾರದೆ ಕೃತಿರಚಿಸಲ್ಮತಿಯಿಲ್ಲವು ।
ದಾರಿಯು ತೋರಿಸುತನುಗಾಲವು ನೀರಕ್ಷಿಸುವುದು ತಾಯೆ ॥

(೭) ವಾಸವಾದಿಮುಖ್ಯಾಮರ ವಂದಿತ |
ಮೂಷಿಕವಾಹನ ದೋಷವಿಭಂಜನ |
ಶೇಷನನುದರಕೆ ಬಿಗಿಯುತೆ ಚಂದ್ರಗೆ ಶಾಪವನಿತ್ತವನು ||
ಈಶನ ಸುತನು ಗಣೇಶನು ವಿಘ್ನವ |
ನಾಶವನೆಸಗುತೆ ಭಜಿಸುವ ಭಕ್ತರ |
ಆಶೆಯ ಪೂರೈಸುವ ಗಣಪತಿ ಸತ್ಕರುಣದೆ ರಕ್ಷಿಸಲಿ ||

(೮) ಗುರುಲಘು ಯತಿಗಣ ಲಿಂಗ ವಚನವುರು |
ತರದಾಪ್ರಾಣಪ್ರಾಸು ವಿಭಕ್ತಿಯು |
ಪರಿವಿಡಿಯರಿಯದ ಪಾಮರನಿದರಲಿ ದೋಷವಿರಲು ಬುಧರು ||
ನೊರೆವಾಲೊಳು ಬೆರೆತಿಹ ನೀರ್ವನಿಗಳ |
ತೊರೆಯುತೆ ಹಾಲನು ಹೀರುವ ಹಂಸನ |
ತೆರದಲಿ ದೋಷವನೆಣಿಸದೆ ಗುಣಗಣವಾರಿಸಲೆರಗುವೆನು ||

(೯) ಕನ್ನಡ ಸಕ್ಕದಗಳನುಡಿಪರಿವಿಡಿ |
ಯುನ್ನತ ಮೇರುವಿನಂತಿರಲದರಲಿ |
ಸಣ್ಣ ಹರಳಪರಮಾಣುವಿನಷ್ಟನು ನನ್ನಿಯೊಳರಿಯುವನು ||
ಕನ್ನಡದಲಿ ಸಂಸ್ಕೃತದಲ್ಲಿರುತಿಹ |
ಚನ್ನಿಗನಂತನ ಕಥೆಯನು ರಚಿಸಿರೆ |
ಮನ್ನಿಸದಿರುವರೆ ಚಂದ್ರನ ತೆರದಲಿ ದೋಷವಿರಲುಬುಧರು ||

(೧೦) ರಸದಾಳಿಯ ಕಬ್ಬುರೆ ಡೊಂಕಾಗಿರೆ |
ರಸವಿನಿದಲ್ಲವೆ? ಕಪ್ಪುಬಣ್ಣದಿಂ |
ದೆಸೆಯುವ ಗೋವಿನ ಹಾಲಿನ ಬಣ್ಣವು ಬಿಳಿದಲ್ಲವೆ ಜಗದೆ ||

ಹೊಸಬನಿವನು ಮೇಣರಿಯದಪಾಮರ ।
ನೆಸಗಿದ ಕೃತಿಯಿದು ದೋಷವಿರುವದೆಂ ।
ದುಸುರುತೆ ನೋಡದೆ ಬಿಡುವರೆ ಶ್ರೀಹರಿ ಚರಿತವ ಸಜ್ಜನರು ॥

(೧೧) ಹರುಷದೆ ಸೂತಪುರಾಣಿಕ ವಿವರಿಸಿ ।
ತರತರವಾದಾ ವ್ರತನಿಯಮಗಳನು ।
ಹರಿಲೀಲೆಗಳನು. ಹೇಳುತನಂತನ ವ್ರತವನು ಧರ್ಮಜಗೆ ॥
ಮುರವೈರಿಯು ಹೇಳಿಹನೆನೆ ಶೌನಕ ।
ಪರಿವೃತ ಮುನಿಗಣದೊಳಗಿಂತೆಂದನು ।
ಅರುಹೆಲೆ ಸೂತನೆ ವಿಸ್ತಾರದೊಳಾ ಕಥೆಯೊಗೆಮಗೆನಲು ॥

ಅಂತೂ ಪದ್ಯ ೧೧ಕ್ಕೆ ಮಂಗಳಮಸ್ತು.

ಕಥಾರಂಭ.

(೧) ಸೂತನಾಗಳಾ ಶೌನಕಾದಿಮುನಿ ।
ಗೋತು ಜೇಗದಿಂದೆಂದನು ಪೂರ್ವದೆ ।
ಭೂತಲದಲ್ಲತಿ ಧರ್ಮಪರಾಯಣನಾದಾ ಧರ್ಮಜನು ॥
ಭೂತಲದೊಡೆಯ ಬೃಹದ್ರಥನೆಂಬನ ।
ಜಾತಜರಾಸಂಧನ ವಧೆಯಾಗಲು ।
ಪೂತಸುಗಂಗಾ ತೀರದೆ ತೊಡಗಿದ ರಾಜಸೂಯಮಖವ ॥

(೨) ಮೇದಿನಿಪತಿಯಾಧರ್ಮಜ ಕೃಷ್ಣನ ।
ನಾದಿಯೊಳಾಲೋಚಿಸುತನುಜಾತರ ।
ಮೋದದಿನಾಲಿಸುತವರನುಮತದಲಿ ಯಾಗದ ಮಂಟಪವ ॥

ಮೇದಿನಿಯಲ್ಲತಿ ವಿಸ್ತರವಾಗಿಯೆ ।
ಆದಿವಿಜೇಂದ್ರನ ಸಭೆಯಂತುರೆ ಗೋ ।
ಮೇಧಿಕ ಮೊದಲಾಗಿಹ ನವರತ್ನದೆ ಬೆಸಸಲ್ ರಚಿಸಿದರು ॥

(೩) ರಾಜಸೂಯಮುಖಕಾಯಮುಜನು ಸಖ ।
ರಾಜರನಾಪ್ತರ ಬಂಧುಗಳೆಲ್ಲರ ।
ರಾಜರೀತಿಯಿಂದಾಮಂತ್ರಣೆಯನ್ನೀಯುತೆ ಕರೆಯಿಸಲು ॥
ರಾಜಕುಲೋದ್ಭವ ಧೃತರಾಷ್ಟ್ರನಿಗಾ ।
ರಾಜಿಸುತಿಹಸುತ ಕೌರವನನುಜರ ।
ರಾಜಶೀವಿಯಿಂದೊಡಗೂಡುತ್ತೈತಂದನು ಭರದಿಂದ ॥

(೪) ವರಮುಖಮುಂಟಪಕ್ಕೈತಹ ಕೌರವ ।
ಕೆರೆಯಂತೊಪ್ಪುವ ಹಂದರವೀಕ್ಷಿಸಿ ।
ಸರವೆಂದೆನ್ನುತೆ ಭಾವಿಸಿ ತನ್ನಯ ವಸ್ತ್ರವ ನೇವರಿಸಿ ॥
ಕರಿಗಮನದೆ ನಡೆತರಲದನೀಕ್ಷಿಸಿ ।
ಪರಿಚಾರಿಕೆಯರ ಸಹಿತಾದ್ರೌಪದಿ ।
ಕಿರುನಗೆಯಾಂತುದನರಿತಾ ಕೌರವಮನದಲಿ ಖತಿಯಾಂತು ॥

(೫) ತುರಗವ ಪಳಿಯುವ ಜವದಿಂದೈದು ।
ತ್ರೆರಡನೆಯೆಡೆಯಲಿ ನೈಜದೊಳಿರುವಾ ।
ಸರಸಿಯನೀಕ್ಷಿಸಿ ಪಳುಕಿನನೆಲವೆಂದೆನ್ನುತೆ ಮನದಲ್ಲಿ ॥
ಕುರುಪತಿ ಭಾವಿಸಿ ಮುಂದೈತಂದತಿ ।
ಭರದಲಿ ಜಲದಲಿ ಮುಳುಗಲು ಕಾಣುತ ।
ಧೊರೆಗಳು ಮುನಿಗಳು ದ್ರೌಪದಿ ಮೊದಲಾಗಿಹ ಸಾರಿಯರೆಲ್ಲಾ ॥

(೬) ಭರದಿಂ ಖೊಳ್ಳನೆ ನಗಲಾಕ್ಷಣದಲಿ ।
ಧರಣಿಪ ಕೌರವನುರುತರ ಕೋಪವ ।
ಧರಿಸುತ್ತೆಂದನು ಮಾವನ ಕರೆದಲ್ಲಿಂದತಿ ಬೇಗದಲಿ ॥
ಹೊರಡುವದೆನ್ನುತೆ ಮುಂದಕೆ ಪೋಗದೆ ।
ಕರಿಪುರಕೈದಲು ತೊಡಗಿದರಾಕ್ಷಣ ।
ಪರಮ ಕಪಟಿಯಹ ಸೌಬಲನರುಹಿದ ಮಧುರವಚನದಿಂದ ॥

(೭) ಕುರುಪತಿ ಲಾಲಿಸು ಮುಂದಿನ ಕಾರ್ಯದೊ ।
ಳಿರುವುದು ಗೌರವವದರಿಂದೀಗಳು ।
ಧರಿಸಿದ ಕೋಪವ ಭರದಲಿ ತೊರೆಯೈ ಮುಂದಿನ ಕೆಲಸವನು ॥
ಅರುಹುವೆ ಕೇಳೈ ಮಖವಿದು ಮುಗಿಯಲು ।
ಧರಣಿಪನನ್ನೊಡಗೂಡುತೆ ಜೂಜನು ।
ಹರುಷದೊಳಾಡಲು ತೊಡಗಿದರೀತನ ರಾಜ್ಯವ ಪಡೆಯುವೆನೀ ॥

(೮) ಕುರುಪತಿಯದರಿಂದೀಗಳೆ ನೀನತಿ ।
ಭರದಿಂದೀಮಖದೋಲಗಕೈದೆಂ ।
ದರುಹಲು ಶಕುನಿಯ ನುಡಿಯಹುದೆನ್ನುತೆ ಬಂದನು ಮಖಗೃಹಕೆ ॥
ಅರಸನ ಮಖವದು ಪೂರಿತವಾಗಲು ।
ನೆರೆದಿಹ ಭೂಭುಜರೆಲ್ಲರು ತಮ್ಮ ತಮ್ಮ ।
ಪುರಗಳ ಹೊಕ್ಕರು ಧರ್ಮಜನಪ್ಪಣೆಗೊಡಲತಿ ಮುದದಿಂದ ॥

(೯) ಕುರುಪತಿಯಾದರು ಧರ್ಮಜನಿಂದೇ ।
ಕರಿಪುರಕೈದಲನುಜ್ಞೆಯ ದೊರಕಿಸಿ ।
ಪೊರಟಲ್ಲಿಂದಾಗಜಪುರಕೈದುತೆ ಕೆಲವು ದಿವಸಗಳಿದು ॥

ಚರರನ್ನತಿ ಭರದಿಂದಟ್ಟುತ್ತಾ ।
ಕುರುಪತಿ ಧರ್ಮಜ ಭೀಮಾರ್ಜುನರನು ।
ಕರೆಯಿಸಿ ಹಸ್ತಿನಪುರದಲಿ ದ್ಯೂತವನಾಡಲು ತೊಡಗಿದನು ॥

(೧೦) ಕಪಟದಿ ದ್ಯೂತವನಾಡುತೆ ಕೌರವ ।
ನಪಹರಿಸಲು ಸಾಮ್ರಾಜ್ಯವ ಧರ್ಮಜ ॥
ದ್ರುಪದನಸುತೆಯನುಜಾತರೊಡನೆ ಬಿಡದಡವಿಯ ಸೇರಿದನು ॥
ಅಪರಮಿತದಸುಖ ಭೋಗದೊಳಿದ್ದಾ ।
ನೃಪವರ ಧರ್ಮಜ ಕಡುಬಡತನದಲಿ ।
ವಿಪಿನ ನಿವಾಸಿಗಳಂತಿರಲದನಾ ಕೃಷ್ಣಗೆ ಚರರರುಹೆ ॥

(೧೧) ವರಧರ್ಮಜನನುಜರು ದ್ರೌಪದಿಯೊಡ ।
ನಿರುವುದನಡವಿಯೊಳರಿತಾ ಕೃಷ್ಣನು ।
ಕರುಣದೊಳಾ ಪಾಂಡವರನು ಸಂತೈಸಲು ಬಲು ಮುದದಿಂದ ॥
ಭರದಲಿ ಕಾಮ್ಯಕ ವನವನು ಸೇರಲು ।
ನರಪತಿ ಧರ್ಮಜ ವನವಾಸದೊಳುರು ।
ತರದುಃಖವ ಹೊಂದಿರಲಾ ಕೃಷ್ಣನ ಪಾದಾಬ್ಜವ ನೋಡಿ ॥

(೧೨) ಶಿರಸಾಷ್ಟಾಂಗದೊಳನುಜರು ದ್ರೌಪದಿ ।
ವೆರಸಾ ಕೃಷ್ಣನ ಚರಣಾಂಭೋಜ ।
ಕ್ಕೆರಗುತೆ ಕೃಷ್ಣನೊಳರುಹಿದ ಸಾಂಪ್ರತವನುಜರೊಡನೆ ನಾನು ॥
ಪರಿಪರಿಯೊಳು ಬಲು ದುಃಖಬಡುವೆನ್ನೈ ।
ಶರಧಿಯೊಳಿರುವೀ ಕಷ್ಟವ ನೀಗುತೆ ।
ವರಮುಕ್ತಿಯನುರೆ ಪಡೆವ ಬಗೆಯ ನೀ ಕರುಣದೊಳರುಹೆನ್ನುತ ॥

(೧೩) ದೇವರ ದೇವನೆ ಪರಮುದಯಾಳುವೆ।
ಭಾವಿಸಿ ಹೇಳುವದೆಮ್ಮಯ ಪೂರ್ವದ।
ಭೂವಲಯವು ಮರಳಿಮ್ಮನು ಸೇರುವೊಲಾವ ದೇವರಾವು॥
ಭಾವಶುದ್ಧಿಯಿಂ ಪೂಜಿಸುತಿಹುದಥ।
ವಾವ ಸುವ್ರತವನಾಚರಿಸಲು ಬೇ।
ಕಾವ ರೀತಿಯಲಿ ನಡೆದರೆ ನಿನ್ನಯ ಕೃಪೆಯಿಂ ಓತವಹುದು॥

(೧೪) ಎನ್ನುತ ಧರ್ಮಜ ನುಡಿದುದನಾಲಿಸಿ।
ಪನ್ನಗಶಯನನು ಮಗುಳಿಂತೆಂದನು।
ಬಣ್ಣಿಸುವೆನು ಕೇಳ್ಧರ್ಮಜ ನಾನಾಪಾತಕ ನಾಶನವು।
ನನ್ನಿಯೊಳಖಿಲ ಮನೋರಥ ಸಿದ್ಧಿಯಿ।
ದುನ್ನತ ಶುಭಕರವಹನಂತನ ವ್ರತ।
ವೆನ್ನುಸ ವ್ರತವೊಂದುಂಟದನಖಿಲರು ಗೆಯ್ಯಲು ಶುಭವಹುದು॥

(೧೫) ವ್ರತವದನೆಸಗಲು ಶುಭಕರವಾದಾ।
ಮಿತಿಯೊಂದಿರುವುದು ಕೇಳೆಲೆ ಧರ್ಮಜ।
ಪ್ರತಿವರುಷವು ಸಿತಪಕ್ಷ ಚತುರ್ದಶಿ ಭಾದ್ರಪವದೆಬಹುದು॥
ಅತಿಭಕ್ತಿಯಲಿ ಅನಂತನ ವ್ರತವನು।
ಪ್ರತಿವರುಷವು ನೀ ತಪ್ಪದೆ ಗೆಯ್ದರೆ।
ಕ್ಷಿತಿಯದು ನಿಮ್ಮದು ದೊರೆಗು ಚತುರ್ದಶ ವರ್ಷದೆ ನಿಶ್ಚಯವೆ॥

(೧೬) ಮುರರಿಪುವಿಂತೆನಲಾಕ್ಷಣ ಧರ್ಮಜ।
ಮುರಳಿಂತೆಂದನನಂತನದಾರೆಂ।
ದರುಹೈ ಕೃಷ್ಣನೆ ಶೇಷಗೆ ತಕ್ಷಕಗಜ ಪರಮಾತ್ಮರಿಗೆ।

ಧರೆಯೊಳನಂತನು ಎಂಬುದರಿಂದಾ।
ನರಿಯೆನನಂತನ ನಿಜವನ್ನುಸುರೆಂ।
ದರುಹಲು ಪೇಳಿದನಂತನು ನಾನೇ ನಿಜವಿದು ಧರ್ಮಜನೆ॥

(೧೭) ಅವನೀಶನೆ ಮುಂದರುಹುವದನು ತಿಳಿ।
ರವಿಯಾದೀಗ್ರಹದಾತ್ಮನನಂತನು।
ಭುವಿಯಲಿ ಕಾಲಕನಂತನು ಎಂಬರು ಮತ್ತೆ ಕಲಾಕಾಷ್ಠಾ॥
ಸವೆವ ಮುಹೂರ್ತ ದಿವಸ ರಾತ್ರೆಗಳಾ।
ವವನ ಶರೀರವೊ? ಪಕ್ಷಮಾಸ ಋತು।
ವಿವುಗಳು ಮೇಣ್ಸಂವತ್ಸರ ಯುಗವೆಂದೆನ್ನುವದೇ ಕಾಲಾ॥

(೧೮) ಧರಣೀಶನೆ ಮೇಲರುಹಿದ ಕಾಲ-।
ಕ್ಕಿರದೆಂಬರನಂತನು ಎಂದೆನ್ನುತೆ।
ಅರಿಯೈ ನೀನಿವನಂತನು ನಾನೇ ಕೃಷ್ಣನ ಹೆಸರನ್ನು॥
ಧರಿಸೀ ಕಾಲದೆ ಭೂಮಿಯ ಭಾರವು।
ಹಿರಿದಾಗಿರಲದ ಪರಿಹರಿಸಲಿಕವ।
ತರಿಸಿದೆನಿದನರಿ ದೈತ್ಯರ ಕೊಲ್ಲಲುದಿಸಿದೆನು ಯದುಕುಲ್ಲದೆ॥

(೧೯) ಧರಣಿಪ ಕೇಳೈ ಸಜ್ಜನ ರಕ್ಷಕ।
ದುರುಳರ ಶಿಕ್ಷಕನೆನ್ನುವ ಬಿರುದಿನ।
ಗಿರುವದಾದಿಮಧ್ಯಾಂತ್ಯರಹಿತ ಹರಿ ಕೃಷ್ಣ ವಿಷ್ಣುವೆನುತೆ॥
ಕರೆಯುವರೆನ್ನನು ಶಿವವೈಕುಂಠೇ।
ಶ್ವರ ಸರ್ವವ್ಯಾಪಿಯು ಸೋಮನು ಭಾ।
ಸ್ಕರ ಬಹುರೂಪಿಯು ಸೃಷ್ಟಿಯ ಸಂಹಾರಕನು ಮಹಾಕಾಲ॥

(೨೦) ಮನುಜೇಂದ್ರನೆ ಕೇಳೆನ್ನ ಮಹಾತ್ಮೆಗ ।
ಳನು ಭವವುರೆ ನಿನಗಾಗಲುಸುರುವೆನು ।
ವನದೊಳಗಿರುವಾಯೋಗಿಗಳಿಗೆ ಮಿಗೆ ಜಾನವನೆಸಗಲಿಕೆ ॥
ಅನುಪಮ ಯೋಗ್ಯವದುತ್ತಮವಲ್ಲದೆ ।
ಮನುಜರಿಗರಿಯಲಸಾಧ್ಯವ ರೂಪಗ ।
ಳನು ಧರಿಸುವೆನೀ ಧರೆಯೊಳಗಾನಾವಿಶ್ವರೂಪದಲ್ಲಿ ॥

(೨೧) ಯಮುಜನೆ ಕೇಳ್ವೈ ಹದಿನಾಲ್ಕಿಂದ್ರರು ।
ವಿಮಲ ವಸುಗಳವರೆಂಟು ಮಂದಿ ಮೇಣ್ ।
ಕಮಲಾಪ್ತರು ದ್ವಾದಶವೇಕಾದಶ ರುದ್ರರಿಹರು ಮತ್ತೆ ।
ಕ್ರಮದಿಂದೇಳೃಷಿ ಸಪ್ತಾಂಬುಧಿಗಳು ।
ಹಿಮಗಿರಿ ಮೊದಲಾದೇಳ್ಪರ್ವತಗಳು ।
ವಿಮಲ ನದೀಗಳಸಂಖ್ಯವು ತರುಲತೆಯೆಣಿಸಲಶಕ್ಯವವು ॥

(೨೨) ಅರಸನೆ ಕೇಳಶ್ವಿನಿಯೇ ಮೊದಲಾ ।
ಗಿರುವಿಪ್ಪತ್ತೇಳೂ ನಕ್ಷತ್ರವು ।
ಧರೆಯೊಳಗಿನ ದಶದಿಕ್ಕುಗಳಲ್ಲದೆ ಹದಿನಾಲ್ಕೂ ಲೋಕ ।
ಪರಿಕಿಸಲೆನ್ನಯನಂತ ರೂಪವೆನಿ ।
ಸಿರುವುದರಿಂದತಿ ನೈಜದೆ ಮನದ ।
ಲ್ಲರಿಯೈ ನಾನೆ ಅನಂತನು ಎನ್ನುತೆ ನಿಸ್ಸಂಶಯದಿಂದ ॥

(೨೩) ದೇವರ ದೇವನು ಈಪರಿಯುಸುಹಲು ।
ಭಾವ ಶುದ್ಧದಿಂದವನಿಂತೆಂದನು ।
ದೇವ ಹೇಳನಂತನ ವ್ರತದನುಹಾತ್ಮ್ಯೆಯ ವಿಧಿಯಾವ್ರತವ ।

ಭೂವಲಯದೊಳದನೆಸಗಿದರೇಕೋ ।
ಭಾವದೆ ದೊರಕುವದಾವ ಫಲವು ಮೇ ।
ಣಾವದಾನವೀಯಲು ಬೇಕಾರನು ಪೂಜಿಸಬೇಕೆನುತೆ ॥

(೨೪) ಪರಮುದಯೊಳುವೆ ಪೂರ್ವದೊಳೀವ್ರತ ।
ವಿರವೆ ಭಕ್ತಿಯಿಂದಾರು ಮಾಡಿದರು ।
ಧರೆಯಲ್ಲವರಿಗೆ ಯಾವ ಫಲವು ದೊರೆಯಿತು ಈ ವ್ರತವನ್ನು ॥
ಕುರುಗೆಯ್ವವರಾರೆನ್ನುತೆನಗೆ ನೀ ।
ಕರುಣದೆ ವಿಸ್ತರದಿಂದೆಲ್ಲವನೀ ।
ಗರುಹಲು ಬೇಕೆಂದೆನ್ನಲು ಕೃಷ್ಣನು ಹೇಳಿದ ಧರ್ಮಜಗೆ ॥

(೨೫) ಅರಸನೆ ಪೂರ್ವದೆ ಕೃತಯುಗದಲಿ ಭೂ ।
ಸುರ ಸುಮಂತುವೆಂಬವನಿರುತಿದ್ದನು ।
ವರವಾಸಿಷ್ಠ ಸುಗೋತ್ರದ ಭೃಗುಸುತೆ ದೀಕ್ಷೆಯನಾತನಿಗೆ ॥
ನೆರೆ ವೇದೋಕ್ತದ ತೆರದಿಂ ಲಗ್ನವ ।
ನಿರದೆ ಮಾಡಿ ಕೆಲಕಾಲವು ಕಳೆಯಲು ।
ತರುಳೆಯುದಿಸಿದಳು ದೀಕ್ಷೆಯುದರದಲನಂತಸುಲಕ್ಷಣದೆ ॥

(೨೬) ಕೇಳವನಿಪ ಹನ್ನೆರಡನೆ ದಿವಸದೆ ।
ಬಾಲಕಿಗಿಟ್ಟರು ಮೋಹದೆ ನಾಮವ ।
ಶೀಲೆಯು ಎನ್ನುತೆ ಜೋಜೋ ರಾಗವ ಪಾಡುತೆ ಸುದತಿಯರು ॥
ಬಾಲೆಯು ಸಿತಪಕ್ಷದ ಶಶಿಯಂದದೆ ।
ಕಾಲಕಾಲಕಭಿವೃದ್ಧಿಯ ಪೊಂದಿ ಸು ।
ಶೀಲೆಯಾಗಿ ಪ್ರತಿದಿನ ಬಳೆಯುತ್ತಿರಲಾಪಿತನಾಲಯದೆ ॥

(೨೭) ತಿರೆಯಾಣ್ಮನೆ ಮುಂದಕೆ ಕೆಲಕಾಲಾಂ ।
ತರದಲಿ ಶೀಲೆಯು ತಾಯುಹ ದೀಕ್ಷೆಯು ।
ಜ್ವರದಾಹದೆ ಪೀಡಿತಳಾಗಿ ನದೀ ತೀರದೊಳಸ್ಥಿರದ ॥
ನರದೇಹವ ತೊರೆದೊಡನೆ ಪತಿವ್ರತೆ ।
ಭರದಿಂದುತ್ತಮ ದೇಹವ ಧರಿಸು ।
ತ್ರಿರದೆದಿವಕೆ ತೆರಳಲು ಬಳಿಕಾಮೇಲ್ನಡೆದ ಚರಿತೆಯನ್ನು ॥

(೨೮) ಪೊಡವಿಪ ಕೇಳಾದೀಕ್ಷೆಯು ಸಗ್ಗಕೆ ।
ನಡೆಯಲು ಬಿಡದಾಮೇಲೆ ಸುಮಂತುವು ।
ಪೊಡವಿಯಲ್ಲಿ ಬಾಳ್ವೆಯನೆಸಗಲು ತಾನೆರಡನೆ ಲಗ್ನವನು ॥
ಬಿಡದಾಗುವೆನೆಂದೆನ್ನುತೆ ಮಗಳನು ।
ಕೊಡುವರನರಸಲು ಧರ್ಮನಿಷ್ಠ ತಾ ।
ಕೊಡಲೊಪ್ಪಿದನತಿಮುದದಿಂ ಕರ್ಕಶೆಯೆಂಬ ಕುಮಾರಿಯನು ॥

(೨೯) ಎರಡನೆಲಗ್ನಯಥಾವಿಧಿಯಿಂದತಿ ।
ಭರದಿಂದಾಯಿತು ಕರ್ಕಶೆಯೆಂಬುದು ।
ಸರಿಯಾದನ್ವರ್ಥಕನಾಮವು ಕೇಳಾಕೆಯ ಗುಣಗಳನು ॥
ನಿರುತಂ ಕರ್ಕಶ ಭಾಷಿಣಿ ಸರ್ವದ ।
ಪರರೊಳು ಕಲಹವ ಗೆಯ್ವಳು ಚಂಡಿಯು ।
ಉರುತರ ಕೋಪಾವಿಷ್ಟಳಾಕೆ ದುರ್ನಡತೆ ತವರ್ಮನೆಯು ॥

(೩೦) ಶೀಲೆಯೆಂಬ ಹೆಸರೊಪ್ಪುವ ತೆರದೆ ಸು ।
ಶೀಲೆಯೆನಿಸುತಾ ದೀಕ್ಷೆಯ ಸುತೆ ಪಿತ ।
ನಾಲಯದಲಿ ಬಳೆಯುತ್ತಿರುತಾ ಪಿತನಾಲಯದಲ್ಲಿರುವಾ ॥

ಸಾಲಗೊಂಡ ಕಂಭಗಳೊಳ್ ದ್ವಾರದೆ।
ನೀಲಪೀತ ರಕ್ತಾದಿ ವರ್ಣದಿಂ।
ಬಾಲಕಿ ನಾನಾರಂಗಿನ ಬಣ್ಣವನೆಸಗುತ್ತದರಿಂದ॥

(೩೧) ತರತರಚಿತ್ರವ ಬರೆಯುತೆ ಸ್ವಸ್ತಿಕೆ।
ಮೆರೆಯುವ ಶಂಖಾಬ್ಜವ ರಚಿಸುತ್ತನ।
ವರತಭಕ್ತಿಯಿಂದಪಚಿತಿಯನೆಸಗುತೆ ಪಿತನಾಲಯಕೆ॥
ನೆರೆ ಶೋಭೆಯನುದಯಿಸುತಿರೆ ಬಹುದಿನ।
ವಿರವೆ ಸಂದುದಾ ಪಿತನಾಲಯದಲಿ।
ಹರಿಯುತೆ ಬಾಲತ್ವವು ಯೌವ್ವನವುರೆ ಸೇರಲು ತೊಡಗಿದುದು॥

(೩೨) ಈರೀತಿಲಿ ಮೆಲ್ಲನೆ ಬಾಲತ್ವವು।
ಜಾರುತ್ತಾಸ್ಥಳದಲಿ ತಾರುಣ್ಯವು।
ಸೇರಲ್ತೊಡಗಿದ್ದುದರಿಂದಾಕೆಗೆ ಸ್ತ್ರೀಚಿನ್ಹಗಳೆಲ್ಲಾ॥
ತೋರಲ್ ನೋಡಿ ಸುಮಂತುವು ತನ್ನ ಕು।
ಮಾರೀಗನುರೂಪದ ವರನೆಲ್ಲಿಹ।
ಯಾರಿಪ್ಪರು ಸುಕುಮಾರರು ಭೂರಿಗುಣಾಢ್ಯರು ಜಗದಲ್ಲಿ॥

(೩೩) ಎನುತೆ ಶೋಧಿಸುತೆ ಕಾಣದೆ ಮನದಲಿ।
ಘನಶೋಕವನಾಂತಾರಿಗೆ ಕೊಡಲೆಂ॥
ದನುಮಾನಿಸುತಿರುವಷ್ಟರೊಳಗೆ ಘನ ವೇದವಿಶಾರದನು॥
ಮುನಿಪೋತ್ರಮನಹ ಕನ್ಯಾರ್ಥಿಯು ವಿಗೆ।
ತನಗನುರೂಪದ ಕಾಂತೆಯನರಸುತೆ।
ಮನೆಮನೆಗಳ ಚರಿಸುತ್ತೈದಿದನು ಸುಮಂತುವಿನಾಲಯಕೆ॥

(೩೪) ಮನೆಗಾ ಶ್ರೀಮಾನ್ ಕೌಂಡಿಣ್ಯನು ಬರೆ ।
ಮಣಿದರ್ಘ್ಯಾಸನವಿತ್ತುಪಚರಿಸುತೆ ।
ಮನದೆ ಮೋದವ್ರುಂಟಾಗೆ ಸುಮಂತುವು ಬಂದಿಹ ಕಾರ್ಯವನು ॥
ಎನಗರುಹಲು ಬೇಕೆನ್ನಲು ಕೌಂಡಿ- ।
ಣ್ಯನು ಶೀಲೆಯಗುಣರೂಪವನೀಕ್ಷಿಸಿ ।
ತನಗನುರೂಪದ ಸತಿಯಿವಳೆನ್ನುತೆ ಮನದಲಿ ನಿಶ್ಚಯಿಸಿ ॥

(೩೫) ಭೂಸುರನೊಡನಿಂತೆಂದನು ಮುನಿಪತಿ ।
ಯೇಸುವಾತುಗಳನಾಡಿದನೈಸಲೆ ।
ಆಶಿಸುವೆನು ನಾನೀಸುಕುಮಾರಿಯ ವರನಾಗಲು ನಿಮ್ಮ ।
ಆಸುಮಂತುವೀನುಡಿಗೇಳುತೆ ಸಂ ।
ತೋಷವ ಮನದಲಿ ತಾಳ್ದಾ ಶೀಲೆಯ ।
ಭೂಸುರೇಂದ್ರ ಕೌಂಡಿಣ್ಯನಿಗೀಯಲಿಕೊಪ್ಪಿದ ಶುಭದಿನದೆ ।

(೩೬) ಅರಸ ಸುಮಂತು ಸುಲಗ್ನವಿಡ್ಡದಿಸ ।
ವರವೇದೋಕ್ತದವಿಧಿಪರಿವಿಡಿಯಿಂ ।
ದಿರದಾ ಶೀಲೆಯ ಕೌಂಡಿಣ್ಯಗೆ ಧಾರೆಯನೆರೆಯುತ್ತಿರಲು ॥
ನೆರೆದ ಸುಮಂಗಲೆಯರು ಮಂಗಳವತಿ ।
ಹರುಷದೆ ಪಾಡುತ್ತಿದ್ದರು ವಿಪ್ರರು ।
ಭರದಿಂದಾಶೀರ್ವಾದವ ಗೈದರು ಜಯಘೋಷವ ಮಾಡಿ ॥

(೩೭) ಪರಿವಿಡಿಯಿಂದಾ ಮದುವೆಯ ಕೆಲಸವು ।
ನೆರವೇರಲು ಸತಿಕರ್ಕಶೆಯನು ಭೂ ।
ಸುರನು ಸುಮಂತುವು ಕರೆಯುತ್ತೆಂದ ವಧೂವರರೀದಿನದೆ ॥

ತೆರಳುವರೈ ತನ್ನಯ ಮನೆಗದರಿಂ।
ದಿರದೀವುದು ನಮ್ಮಾಯದೊಳೀಸಾ।
ದರು ಬಳುವಳಿಯನ್ನಳಿಯಗೆ ನಾವತಿ ಸಂತೋಷದ ಬಗ್ಗೆ ॥

(೩೮) ಧನಕನಕವ ಬಳುವಳಿಗೊಡಬೇಕೆನೆ।
ಘನಕೋಪಾನ್ವಿತೆಯಾಗುತೆ ಕರ್ಕಶೆ।
ಮನೆಯಲಿ ಅಗ್ನಿಕ್ಕೋಸ್ಕರ ರಚಿಸಿದ ಗುಡಿ ತೋರಣಗಳನು ॥
ಕ್ಷಣದೊಳಗೆಲ್ಲವ ಮುರಿದುರೆ ಚಲ್ಲುತೆ।
ಮನೆಯೊಳಗಿದ್ದಾ ಧನಕನಕಗಳನು।
ಘನವಾದಾಪೆಟ್ಟಿಗೆಯಲಿ ಭದ್ರತೆಯಿಂದಿರಿಸಳಿಯನನು ॥

(೩೯) ಕರೆಯುತ್ತೆಂದಳು ಬೇಗನೆ ನೀವೀ।
ಗಿರುತಿಹ ಮನೆಯನು ಬಿಟ್ಟೀಕ್ಷಣದಲಿ।
ಹೊರಡಿರಿ ನಿಮ್ಮಯ ಗೇಹಕೆ ತೋಷದೆ ದಾರಿಯೊಳುಣ್ಣಲಿಕೆ॥
ಪರಪಾಥೇಯವಿದೆನ್ನುತೆ ನುಚ್ಚನು।
ಹರಿದ ಬಟ್ಟೆಯೊಳಗಿರದೆ ಬಂಧಿಸುತೆ।
ಭರದಿಂದೀಯುತ್ತಾಕ್ಷಣ ಪತಿಯೊಡನೆಂದಳು ಕರ್ಕಶೆಯು ॥

(೪೦) ಮನೆಯಲ್ಲಿಹ ಹಣವೆಲ್ಲವು ತೀರಿದೆ।
ಎನಗೆಲ್ಲಿಯು ಕಾಣದು ಬೇಕಾದರೆ।
ಮನದಲ್ಲನುಮಾನಿಸದೀಕ್ಷಣದಲಿ ಚನ್ನಾಗಿಯೆ ನೀವು ॥
ಧನವೆಲ್ಲಾದರು ಇರುವುದೊ ಎನ್ನುತೆ।
ಮನೆಯೆಲ್ಲವ ಶೋಧಿಸಿ ನೋಡಿರಿ ಎಂ।
ದೆನಲದ ಕೇಳಿಸುಮಂತು ವಿಮನ ತಾನಾಗಿರಲಾಸಮಯ ॥

(೪೧) ಅರಸ ಲಗ್ನಸಂಬಂಧದ ಕಾರ್ಯವು।
ಪರಿವಿಡಿಯಿಂ ಮುಗಿದಿರೆ ಕೌಂಡಿಣ್ಯನು।
ಹರುಷದೆ ಮಾವನನುಜ್ಞೆಯ ಪಡೆದಾ ಮದುಮಗಳಾಗಿರುವ॥
ಪರಮ ಸುಗುಣೆ ಶೀಲೆಯು ತಾನೊಡಗೊಂ।
ಡಿರದೇರುತೆ ಗೋರಥವನು ಮೆಲ್ಲನೆ।
ಹರಿಸುತೆ ಮಾರ್ಗವ ಕ್ರಮಿಸುತ್ತಿರಲಾದಾರಿಯೊಳಡ್ಡಾಗಿ॥

(೪೨) ಹರಿಯುತ್ತಿದ್ದುದು ಪುಣ್ಯಪ್ರದವಾ।
ಗಿರುವ ಯಮುನೆಯದನುರೆ ನಾವೆಯೊಳು।
ತ್ತರಿಸುತ್ತೆರಡನೆಕಡೆಯಲಿ ಶೀಲೆಯೊಡನೆ ಗೋರಥವನ್ನು॥
ಇರಿಸುತವಶ್ಯದ ನಿತ್ಯವಿಧಿಯನಾ।
ಚರಿಸಲು ಪರಿವೃತ ಶಿಷ್ಯರೊಡನೆ ಭೂ।
ಸುರನೈದಿದನಾನದಿಯೆಡೆಗಿತ್ತಲು ನಡೆದಚರಿತ್ರವನು॥

(೪೩) ನರಪತಿಯಾಲಿಸು ನಡುವಗಲೂಟಕೆ।
ಸರಿಯಾಗಿಹ ಕಾಲದೊಳಾ ಶೀಲೆಯು।
ಭರದಿಂದಾರಥವಿಳಿಯುತೆ ಕಂಡಳು ಯಮುನಾತೀರದಲಿ॥
ಮೆರೆವರುಣಾಂಬರವಾಂತಿಹ ಬಹುಸತಿ।
ಯರ ಸಮುದಾಯವದೇಕೀಭಾವದೆ।
ಪರಮ ಚತುರ್ದಶಿಯಾದಾದಿನದೊಳನಂತನ ಪೂಜಿಪುದ॥

(೪೪) ಅರಸನೆ ಬಳಿಕಾ ಶೀಲೆಯು ಮೆಲ್ಲನೆ॥
ಸರಿಯುತವರ ಬಳಿಗೈದುತ್ತಾಸ್ತ್ರೀ।
ಯರಗುಂಪನು ಕುರಿತಾಗಳೆ ಕೇಳಿದಳಾರ್ಯರೆ ನೀವೀಗ॥

ಅರುಹಿರೆನಗೆ ನೀವೆಸಗುವದೇನೀ|
ಪರಿ ಗೆಯ್ವುವ ವ್ರತಕಾವ ಪೆಸರಾಯೆನ|
ಲರುಹಿದರಾಸ್ತ್ರೀಯರು ಗುಣಭೂಷಣವಾಗಿಹ ಶೀಲೆಯಲಿ॥

(೪೫) ವ್ರತವೃತ್ತಮುವಿವರಕೆಂಬರನಂತನ|
ವ್ರತವೆಂದೆನ್ನುತ್ತೀವ್ರತದಲಿ ಪೂ|
ಜಿತನಪ್ಪವನೆ ಅನಂತನು ಎನಲದನಾಲಿಸುತಾಶೀಲೆ॥
ವ್ರತವೃತ್ತಮುವಿರಲಿದನೆಸಗುವೆನೀ|
ವ್ರತದವಿಧಾನವನೀಯುವ ದಾನವ|
ನತಿವಿಸ್ತಾರದೊಳರುಹಿರಿ ಕರುಣದೊಳೆನ್ನುತ ಪೇಳಿದಳು॥

(೪೬) ಎಂದನುಡಿಯನಾಲಿಸುತಾ ತರುಣಿಯ|
ರಿಂದರು ಶೀಲೆ ಸವನ್ನಪ್ರಸ್ಥದೊ|
ಳೆಂದಗೊಂದು ಸೇರುತ್ತಮ ಪಿಷ್ಟದೆ ಪುರುಷರಹೆಸರನ್ನು॥
ಹೊಂದಿದ ಭಕ್ಷ್ಯವನೆಸಗಿ ತದರ್ಧವ|
ವಂದಿಸಿ ವಿಪ್ರರಿಗೀವುದು ದಕ್ಷಿಣೆ|
ಗೆಂದುಹಣಕೆ ಹಟವೆಸಗದೆ ಕೊಡುವುದು ಶಕ್ತಿಯನನುಸರಿಸಿ॥

(೪೭) ಹರಿವಹೊಳೆಯ ದಂಡೆಯೊಳೀವ್ರತವಾ|
ಚರಿಸ ಬೇಕನಂತನ ಪೂಜೆಯನತಿ|
ವರುಷದೊಳೆಸಗುತ್ತಲ್ಲೇ ದಾನವ ಕೊಡಬೇಕೆಲೆ ಸುಗುಣೆ॥
ಮೆರೆವ ಸಪ್ತಫಣಯುಕ್ತ ಫಣೀಂದ್ರನ|
ವಿರಚಿಸುವುದು ದರ್ಭೆಗಳಿಂದಾ ಫಣ|
ಧರನನು ಬಿದರಿಂದೆಸಗಿದ ಪಾತ್ರೆಯೊಳಿರಿಸುವದಾಮೇಲೆ॥

(೪೮) ಹರಿಯುವ ನೀರೊಳು ಮುಳುಗುತೆ ಮಿಾಯುತೆ।
ಧರಣಿಯು ಗೋಚರ್ಮದ ಪರಿಮಿತದ।
ಷ್ಟುರೆಗೋಮಯದಿಂ ಸಾರಿಸುತದರೊಳಗಷ್ಟದಳವನ್ನಿದೆ॥
ಬರೆದಾಮಂಡಲದಲ್ಲತಿ ನಿರ್ಮಲ।
ವಿರುವಕಲಶದಲಿ ಜಲವನು ಚೂತಾಂ।
ಕುರವನು ಸೇರಿಸಿ ಹೊಸಬಟ್ಟೆಗಳೆರಡನು ಹೊದಿಸಿರಿಸುವದು॥

(೪೯) ವರಕುಶದಿಂದೆಸಗಿರಿಸಿದ ಶೇಷನ।
ಹರುಷದೊಳಾಕಲಶದ ಮೇಲಿರಿಸುತೆ।
ಪರಿಪರಿ ಗಂಧಾಕ್ಷತೆಬಹು ಫರಿಮಳದಿಂದೊಡಗೂಡಿರುವ॥
ತರತರಪೂಗಳು ಧೂಪ,ದೀಪಮೇ।
ಲರುಹಿದಭಕ್ಷದ ನೈವೇದ್ಯಗಳಿಂ॥
ಪರಿವಿಡಿಯಿಂದುರೆ ಭಕ್ತಿಯೊಳೆಸಗುವದಪಚಿತಿಯನು ಮತ್ತೆ॥

(೫೦) ನಿರುತಂ ಕುಂಕುಮ ವರ್ಣದೆ ಶೋಭಿಸು।
ತುರುತರ ಧೃಡವಾಗಿದ್ದು ಚತುರ್ದಶ।
ಮೆರೆಯುವ ಗಂಟುಗಳಿಂದೊಡಗೂಡಿವನಂತನದಾರವನು॥
ಇರಿಸುತ್ತಾಕಲಶದ ಮುಂಗಡೆಯಲಿ।
ಪರಿವಿಡಿಯಿಂದುತ್ತಮ ವಿಧಿಪೂರ್ವಕ।
ವಿರಚಿಸುವದು ಗಂಧಾಕ್ಷತೆ ಪುಷ್ಪಗಳಿಂದಪಚಿತಿಯನ್ನು॥

(೫೧) ಪರಿವಿಡಿಯಿಂದೀವ್ರತವನು ಮಾಡುವ।
ವರು ಗಂಡಸರಾದರೆ ಬಲಗೈಯಲಿ।
ತರುಣಿಯರಾದರೆಡದಕರದಲನಂತನದಾರವ ತಾವು॥

ಇರದೆ ಕಟ್ಟಿಕೊಳ ಚೀಕಾದಾರವ |
ಧರಿಸುವ ಪೂರ್ವದೊಳೀಪರಿಯಿಂದೀ |
ಪರಮ ಭಕ್ತಿಯಲಿ ಶಿರವನೆರಗಿ ನುತಿಸುವದಾದಾರವನು ॥

(೫೨) ಎಲೆ ಅನಂತ ಸಂಸಾರ ಸಮುದ್ರದೆ |
ನೆಲೆಗಾಣದೆ ಮುಳುಗಾಡುವೆನೆನ್ನನು |
ಸಲೆ ಮೇಲಕೆ ತೆಗೆ ವಾಸುದೇವ ನಿನ್ನಮಿತ್ರರೂಪದಲ್ಲಿ ॥
ನೆಲೆಗೊಳಿಸೆನ್ನ ಮನವನು ನಿರಂತರ |
ಸಲೆ ಬಹುರೂಪಿಯನಂತನ ದಾರವಿ |
ರಲಿ ನಿನ್ನಡಿಗಳಿಗೆನ್ನನಮಸ್ಕಾರಗಳಡಿಗಡಿಗೆನುತೆ ॥

(೫೩) ಕರದೊಳನಂತನ ದಾರವ ಧರಿಸು |
ತ್ತಿರದೆ ಅನಂತನ ಕಥೆಯಿದನಾಲಿಸಿ |
ಸ್ಮರಿಸುತನಂತನ ವಿಶ್ವರೂಪಿ ನಾರಾಯಣ ದೇವೆನುತೆ ॥
ಇರದಾರೋಗಣೆಯೆಸಗುತೆ ಕಡೆಯಲಿ |
ತೆರಳುವದೈ ಮನೆಗೀವ್ರತವನು ನಿನ |
ಗರುಹಿದೆವೆಲೆ ಭದ್ರೆಯೆ ನೀ ಕೇಳಿದ ಕಾರಣದಿಂದೀಗ ॥

(೫೪) ಅರಸನೆ ಕೇಳೀ ವ್ರತವನ್ನಾ ಸ್ತ್ರೀ |
ಯರ ಬಳಿಯಿಂದಾ ಶೀಲೆಯು ಕೇಳುತೆ |
ಪರಮ ಹರ್ಷವನ್ನಂತರಾತ್ಮದೊಳಗಾಂತುರೆ ಭಕ್ತಿಯಲಿ ॥
ದೊರಕಿದಪ್ಪರಿಂದಾಕೆಯಾದಿನವೆ |
ಭರದಿಂದಾವ್ರತವೆಸಗುತ್ತಾಗಳೆ |
ಪರಿಪಿಡಿಯಿಂದಾದಾರವನೆಡಗೈಯಲಿ ಬಂಧಿಸಿ ಕೊಳುತ ॥

(೫೫) ತಂದಿಹ ಬುತ್ತಿಯೊಳರ್ಧವ ವಿಪ್ರಗೆ ।
ವಂದಿಸೀಯುತುಳಿದರ್ಧವ ಪತಿಗಾ ।
ನಂದದೆ ಬಡಿಸುಳಿದುದನಾರೋಗಣೆಯೆಸಗುತೆ ಗೋರಥವ ॥
ಚಂದದೊಳೇರುತೆ ಮೆಲ್ಲನೆ ಮಾರ್ಗವ ।
ಮುಂದಕೆ ಗಮಿಸುತೆ ಮನೆಯನು ಸೇರಲು ।
ಬಂದಿತನಂತನ ವ್ರತವೆಸಗಿದ ಫಲವಾಕ್ಷಣದಲಿ ಬಿಡದೆ ॥

(೫೬) ವ್ರತದ ಪ್ರಭಾವದೆ ಗೋಧನಸಂಕುಲ ।
ವತಿ ಹೆಚ್ಚಿತು ಮನೆಯಲಿ ವನ ಸಂಪ- ।
ನ್ನತೆಯನು ಹೊಂದಿತು ಧನಧಾನ್ಯಾದಿಗಳತುಳೈಶ್ವರ್ಯದಲಿ ॥
ಸತತವತಿಥಿ ಪೂಜೆಗಳಿಂದಾಗೃಹ ।
ವತಿರಮ್ಯತೆಯನ್ನಾಂತುವವಳು ಭೂ ।
ಷಿತೆಯಾದಳು ನವರತ್ನದೊಡವೆ ಮುತ್ತಿನಹಾರಗಳಿಂದ ॥

(೫೭) ತರತರ ರತ್ನವಿಭೂಷಣ ದಿವ್ಯಾಂ ।
ಬರಗಳನಾಂತಾ ವರ ಸಾವಿತ್ರಿಗೆ ।
ಸರಿಯೆನಿಸೊಪ್ಪುತೆ ಶೀಲೆಯು ಗಂಡನ ಮನೆಯಲಿ ಸುಖದಿಂದ ॥
ಇರುತಿದ್ದಳು ಪತಿಯೆಮುಂಗೊಂದು ದಿನ ।
ಹರುಷದೆ ಕೂತಿರಲಿಡಗೈಯೊಳಗುರೆ ।
ಮಿರುಗುವನಂತನ ದಾರವನಾಮುನಿಯೀಕ್ಷಿಸುತಾಕ್ಷಣದೆ ॥

(೫೮) ಕರದಲಿ ತೋರುವದೇನಿದು? ಶೀಲೆಯೆ ।
ನಿರುತಂ ನಿನ್ನವಶದೊಳಾನಿರಲಿಂ ।
ದಿರದಾಂತಿರುವೆಯೊ? ಅಲ್ಲದಿರಲು ನೀನೊಡವೆಗಳೊಡನಿವನು ।

ಧರಿಸುತ್ತಿದ್ದೆಯೊ? ದಾರವನೇತಕೆ? ।
ಕರದೊಳಗಾಂತಿಹೆ ಎಂಬುದನಿಜದೊಳು ।
ಸುದು ನೀಸೆನಲಾ ಶೀಲೆಯು ಪತಿಯೊಡನತಿವಿನಯದೊಳಾಗ ॥

(೪೯) ಧರೆಯೊಳೆ ಯಾರೀಗಾದರು ಯಾವನ ।
ಕರುಣದೆ ಸಕಲ ಧನಾದಿಯು ಸಂಪದ ।
ದೊರೆವುದೊ? ಅತ್ರನ ಎಂದವರನಂತನ ದಾರವಿದನು ಕರದೆ ॥
ಧರಿಸಿಹೆನಾಲಿಸೆನಲವಕಾದ್ವಿಜ
ಸಿರಿಯು ಮದದೊಳತಿ ಕುರುಡತನವು ದೊರ ।
ಕಿರಲಾ ಶೀಲೆಯೊಡವೆಕೈಯೊಳಗಿಹ ದಾರವನುಚ್ಚುತ್ತಿ ॥

(೫೦) ಸಿರಿಯುನ್ನೀಯುವನಂತನು ಯಾವ
ಲ್ಲಿರುತಿಹನೀದಾರದೊಳೆಂದು ತಿರ- ।
ಸ್ಕರಿಸುತನಂತನ ಮೂರ್ಖತನದೊಳತಿ ಪಾಪಕಾರಿಯಾಗಿ ॥
ಭರದಿಂದಾದಾರವನಗ್ಗಳಿಕೆಯೊ ।
ಳುರಿಯುವಗ್ನಿಯೊಲಿ ಬಿಸುಡಿದನೊಡನತಿ ।
ಭರದಿಂದೋಡುತ್ತಲ್ಲಿಗೆ ಶೀಲೆಯು ಹಾಹಾಕಾರದಲಿ ॥

(೫೧) ಉರಿಯುತ್ತಿರುವಾ ದಾರವ ಮೇಲವ ।
ಸರದಿಂದಾಕ್ಷಣ ತೆಗೆದುರಿಯಾರಿಸಿ ।
ನೊರೆಪಾಲಿನ ಗಡಿಗೆಯೊಳವಸಿರದೇ ಚಲ್ಲಿದಳತಿ ಬೇಗ ॥
ಧರಣಿಯುಮರಸೆಸಗಿರುವಾ ಕೃತ್ಯದೆ ।
ಸಿರಿಯುದನಂತನ ದಯದಿಂದೈತಂ ।
ದಿರುವಷ್ಟಾತೆರದಿಂದ್ವಿಪತ್ತಡಸಿತು ಕಡುಬಡತನವು ॥

(೬೨) ಅರಸನೆ ಕೇಳಾತನ ಗೋಧನಗಳ ।
ನುರೆ ಕಳ್ಳರು ಕದ್ದೊಯ್ದರಡವಿಯುಲಿ ।
ಭರದಿಂದಿಹ ಸದನವು ಸುಡಲಾದ್ರವ್ಯದ ನಾಶನವಾಯ್ತು ॥
ಬರುವಾಗಾವುದು ಹೇಗೆಲ್ಲಿಂದತಿ ।
ಭರದಿಂದ್ಯೈದಿತೊ? ಆತೆರದಿಂದೇ ।
ಮರಳಲ್ಲಲ್ಲಿಗೆ ಮನೆಯುಲ್ಲೊಡವೆಯು ನಿಲ್ಲದ್ಯೈದಿತೆಲ್ಲಾ ॥

(೬೩) ಬಿಡದೆ ಅನಂತಾಕ್ಷೇಪವನೆಸಗಿದ ।
ಕಡುಪಾಪದೊಳಾತಗೆ ಬಲು ಬಡತನ ।
ವಡಸಿತು ಗೇಹದೊಳನುದಿನ ತನ್ನವರಿಂದುರೆ ಜಗಳಗಳು ॥
ಅಡಿಗಡಿಗಾಗಲು ತೊಡಗಿದವಾಗಳು ।
ಪೊಡವಿಯೊಳಾರಾದರು ಮಾತಾಡರು ।
ಹೊಡೆಯುಲು ತೊಡಗಿದರಾತನಬಂಧುಗಳವನನ್ನುರೆಮುಳಿದು ॥

(೬೪) ಸತಿಯೆಸಗಿದ ಪುಣ್ಯದೊಳತಿ ಸಂತ ।
ಪ್ತತೆಯುಂಗದೊಳತಿ ದುಃಖವು ಮನದೆ ವಿ ।
ರತಿ ಸರ್ವತ್ರದೊಳುಂಟಾಯಿತು ಕೌಂಡಿಣ್ಯಗಾಗಲವನು ॥
ಸತಿಯೊಡನೀಪರಿಯುರುಹಿದನೆಲಿ ಗುಣ ।
ವತಿ ಶೀಲೆಯೆ ನಾನಾಪರಿಯಿಂದೆನ ।
ಗತಿಶಯ ದುಃಖವು ಜನಿಸುವ ಕಾರಣವನು ತಿಳಿಯೆನು ಸತತ ॥

(೬೫) ನಿಮತ್ರಂ ಸ್ವಜನರೊಳಾಗುವದೇಕುರು ।
ತರ ಜಗಳವು ಬಿಡದಡಗಿತದೇಕೈ ।
ಸಿರಿಯುಡಿಸುತ್ತಿಹುದೇತಕ್ಕಡಿಗಡಿಗುರೆ ಚಿಂತೆಯು ಮನದೆ ।

ಪರುಷದೊಳೊಡನುಡಿಯುರದೇತಕ್ಕೊ ।
ಬ್ಬರು ಶಾರೀರದೊಳುಂಟಾಗುವದೇ ।
ಕುರುತರತಾಪವು ಜನಿಸುವದೇಕತಿದಾರುಣವಹ ಖೇದ ॥

(೬೬) ಪರಿಕಿಸೆ ಗೋಚರವಾಗದದೆನ್ನಯ ।
ಕರವಿಂದಾವುದನೀತಿಯು ಕೆಲಸವು ।
ಜರುಗಿತೆಂಬುದನು ಮುಂದೇನನು ನಾನೆಸಗಿದರೀಸ್ಥಿತಿಯು ॥
ಪರಿಹರವಾಗುತೆ ಮೊದಲಿನ ಸುಸ್ಥಿತಿ ।
ದೊರೆದೀತೆಂಬುದನರಿತರೆ ನೀನೆನ ।
ಗರುಹೆನಲವಕೆ ಸುಸಾಧ್ವಿಸುಶೀಲೆಯು ಹೇಳಲು ತೊಡಗಿದಳು ॥

(೬೭) ಕರುಣದೊಳಾರ್ಯರೆ ಲಾಲಿಸಿ ತಮಗೀ ।
ಪರಿಯಿಂದತಿ ದುಃಖಪದಾಗಲು ಬಹು ।
ತರವಾಗಿ ಅನಂತಾಕ್ಷೇಪವ ತಾವೆಸಗಿದ ಕಾರಣದೆ ॥
ಇರದೊದಗಿದ ಪಾಪಕ್ಕೋಸ್ಕರ ಜನ ।
ಿರುವೀ ಫಲವಿದನಂತನ ದಯದಲಿ ।
ಹರಿವುದರಿಂದಾಯತ್ನವೆಸಗ ಬೇಕೆನ್ನುತೆ ತೋರುವದು ॥

(೬೮) ಸತಿಯೊಪರಿಯುಸುಹುತ್ತಿರಲಾ ಮುನಿ ।
ಪತಿ ಮನದೊಳನಂತನ ಭಜಿಸಲು ತೊಡ ।
ಗುತನಂತಗೆ ಶರಣಾಗತನಾಗುತೆ ಮಿಗೆ ಪಶ್ಚಾತ್ತಾಪ ॥
ಮತಿಯುಳಿಡಪಿಯುನು ಕುಟಿಕಾಗಳೆ ಹೊರ ।
ಡುತೆ ನಿಶ್ಚಯಿಸಿದನಂತನು ತನಗೊಲಿ ।
ವ ತನಕ ಗಾಳಿಯನುಣ್ಣುತೆ ತಪವಾಚರಿಸಲು ಬೇಕೆನುತ ॥

(೭೯) ಮನದೆ ವಿಚಾರವನೆಸಗಲು ತೊಡಗಿದ।
ನೆನಗಿನ್ನೆಲ್ಲಪ್ಪದನಂತನ ದರು।
ಶನವಾತನ ದಯದಿಂದೊದಗಿತು ಸಕಲೈಶ್ವರ್ಯವು ಬಿಡದೆ॥
ಕ್ಷಣದೊಳಗವನಾಕ್ಷೇಪವನೆಸಗಲು।
ಧನವೆಲ್ಲವು ನಾಶನವಾಗುತೆ ಬಡ।
ತನವಡಸಿತನಂತನ ಪಾದಾಬ್ಜವನಾನೆಲ್ಲೀಕ್ಷಿಪೆನು॥

(೭೦) ಧನಕನಕಗಳೆಂಬೀವಿಷಯಗಳುರೆ।
ಘನವಹ ಸುಖದುಃಖಗಳನು ಸರ್ವದ।
ಮನುಜರಿಗೀಯುವವೆಂದೀಪರಿಯಲಿ ಮನದೆ ವಿಚಾರಿಸುತೆ॥
ಮುನಿಯತಿ ಘೋರಭಯಂಕರವಾಗಿಹ।
ವನದಲಿ ಸಂಚರಿಸಲು ತೊಡಗಿದನಾ।
ವನದೊಂದೆಡೆಯಲಿ ಕಂಡನು ಮಾಮರವೊಂದುರೆ ಬೆಳೆದುದನು

(೭೧) ಮರವೆಲೆ ಹೂಗಾಯ್ಗೊಂಗೆಗಳಿಂದುರೆ।
ಮೆರೆಯುವದಳಿಶುಕಪಿಕಗಳದನು ತೊರೆ।
ದಿರಲಾಕ್ರಿಮಿಕೋಟಿಗಳಾಮರದಲಿ ತುದಿಬುಡಮೊದಲಾಗಿ॥
ನೆರೆತುಂಬಿರಲಾಧರಣೀಸುರನ।
ಜ್ಞರಿಯಿಂದೀಕ್ಷಿಸಿ ಕೇಳಿದ ಮಾವಿನ।
ಮರವೇ ನೀನೆಲ್ಲಾದರನಂತನ ನೋಡಿರುವಿಯೊ? ಹೇಗೆ॥

(೭೨) ತಿರೆಯೊಳನಂತನ ಕಂಡರೆ ಕರುಣಮೊ।
ಳರುಹೆಲೆ ಸೌಮ್ಯಮಹಾತರುವೇ ನನು।
ಗಿರದಾಗುವವತಿ ದುಃಖವು ಮನದೊಳಗೆನಲಾನುಡಿಗೇಳಿ॥

ಮರವಮ ಕೌಂಡಿಣ್ಯನೊಳೆಂದಿತು ಭೂ ।
ಸುರವರ್ಯನೆ ಭವಾಬ್ಧಿ ತಾರನೆ ನೋ ।
ಡಿರಲಿಲ್ಲವು ನಾನಂತನನಲ್ಲಿಯು ಧಿಟವೀನುಡಿ ನಂಬು ॥

(೭೩) ಮರವಮ ನೋಡಿಲ್ಲೆಂದೆನಲಾಭೂ ।
ಸುರಪತಿ ದುಃಖಿತನಾಗುತನಂತನು ।
ದೊರಕುವನೆಲ್ಲಿನಗೆನ್ನುತ ಚಿಂತಿಸಿ ಮುಂದಕೆ ಗಮಿಸಲಿಕೆ ॥
ಕರುವಿಂದೊಡಗೂಡಿರುವೊಂದಾಕಳು ।
ಭರದಿಂದತ್ತಿತ್ತಲು ಜಿಗಿದಾಡು- ।
ತ್ತಿರುವುದನಡವಿಯ ಮಧ್ಯದೊಳೀಕ್ಷಿಸಿದನು ಕೇಳೆಲೆನೃಪನೆ ॥

(೭೪) ಅವನಾಗೋವನು ಕಂಡತಿಜವದಿಂ ।
ದವಸರದಿಂದಾಗೋವಿನ ಬಳಿಗೈ ।
ದವನಿಯೊಳೆಲ್ಲಾದರು ಗೋಮಾತೆ(ಯ) ಕಂಡರನಂತನನು ॥
ತವಕದೊಳುಸುರೆಂದೆನಲವಕಾ ಗೋ ।
ಪವನೊಡನಾಗಳೆ ನುಡಿಯಿತನಂತನ ।
ಭುವನದೊಳೀವರೆಗೆಲ್ಲಿಯು ನಾನವಲೋಕಿಸಿಲ್ಲವೆನುತೆ ॥

(೭೫) ಅವನಾಲಿಸುತಾ ದ್ವಿಜಮುಂಪೈದುತೆ ।
ಪದದಲಿ ಬೆಳೆದೆಳೆವುಲ್ಲಿನ ನಡುವುರೆ ।
ಪದಯುಗ್ಮದ್ವಯವನ್ನೂರುತೆ ನಿಂತಿಹ ಬಸವನ ನೋಡಿ ॥
ಮುದದಲಿ ಬೆಸಗೊಂಡನು ಗೋಸ್ವಾಮಿಯೆ ।
ಮೊದಲೀವರೆಗೆಲ್ಲಾದರನಂತನ ।
ಪದಯುಗಳವ ಕಂಡರೆಪೇಳೆನಲದು ನೋಡೇ ಇಲ್ಲೆನಲು ॥

(೭೬) ಭರದಿಂದಾದ್ವಿಜ ಮುಂದಕೆ ತೆರಳುತೆ ।
ಸರಸಿಗಳೆರಡನು ಕಂಡನು ನೋಡುವ ।
ವರ ಕಣ್ಮನದಣಿವಂತತಿರಮ್ಯತೆಯಲಿ ಜೋಡಿಯೊಳಿರುತೆ ॥
ಪರಿವಿಡಿಯಿಂದೊಂದರ ನೀರೊಂದಕೆ ।
ಬೆರೆಯುತ್ತಿರುವುದು ತೆರೆಯಲೆದಾಡುತೆ ।
ಪರಿಪರಿಯಿಂದಾಪ್ತರನು ನಿರಂತರೆದುರುಗೊಳ್ಳುವ ತೆರದೆ ॥

(೭೭) ಸರಸಿಗಳೆರಡವು ಕಮಲಕುಮುದ ಜಲ ।
ಚರ ನೀಲೋತ್ಪಲಗಳು ಮಿಗೆ ತುಂಬಿರು ।
ತಿರುವುದರಿಂದತಿ ಶೋಭಿಸುತಾಂತವು ಜಲಪೂರ್ಣತೆಯಿಂದ ॥
ಪರಮ ಹಂಸ ಕಾರಂಡವು ಚಕ್ರನಿ ।
ಕರವು ಬಕಾಳಿಗಣಗಳಾ ಸರಗಳ ।
ನೆರೆಯಲಿ ಚರಿಸುವವಲ್ಲದೆ ಸರಗಳ ಕಣ್ತೆರೆದೀಕ್ಷಿಸವು ॥

(೭೮) ಇಂತುಮೆರೆವ ಸರಸಿಗಳನು ಕುರಿತವ ।
ನಂತನ ಕಂಡರೆ ಹೇಳಿರೆನಲಿಕವ ।
ನಂತನನೀಕ್ಷಿಸಲಿಲ್ಲವೆನಲಿಕಾ ದ್ವಿಜಮುಂದಕೆ ಪೋಗಿ ॥
ನಿಂತಿಹ ಕತ್ತೆಯನಾನೆಯನೀಕ್ಷಿಸ ।
ನಂತನ ಕಂಡಿರುವಿರೊ? ನೀವೆನಲವ ।
ನಂತನನೀಕ್ಷಿಸಲಿಲ್ಲವು ನಾವೀ ಪರಿಗೆಂದವು ಕ್ರಮದೆ ॥

(೭೯) ಧರಣಿಪ ಕೇಳೀ ಪರಿಯಿಂದಾ ಭೂ ।
ಸುರನು ಅನಂತನ ದರ್ಶನದಾಶೆಯು ।
ಧರಿಸಾಯತ್ನವನೆಸಗಿದನೆಂದರ ನಂತನ ಕಂಡವರು ॥

ಧರೆಯಲಿ ಯಾರಾವರು ಇರುತಿದ್ದರ।
ವರ ಕಡೆಯಿಂದಾದರನಂತನು ತಾ।
ನಿರುವಾಸ್ಥಾನವು ತಿಳಿದೀತೆನ್ನುತೆ ಕಂಡವರರಸಿದೆನು॥

(೬೦) ಅವರಿಂದಾದ್ವಿಜಗುಪಯೋಗವದಾ।
ಗದರಿಂವವದನುರೆ ತೋರೆಯುತನಂತನ।
ಪದಕಮಲವ ಕಾಣುವೆನೆನ್ನುತೆ ಮನದೊಳಗಾಂತಾಶೆಯು...
ಮುದುಡಿಸಿ ಕೊಂಡಲ್ಲಿಯೆ ಕೂತನು ಕದ।
ಲದ ಮೊದಲುಪವಾಸದೆ ಮಿಗೆ ತಿರುಗಾ।
ಡಿದ ಕಾರಣವೊದಗಲು ಬಲು ಚಿಂತೆಯು ಜೀವಿಸುವಾಶೆಯನು॥

(೬೧) ತೊರೆದಾದ್ವಿಜನಾಕ್ಷಣ ದೀರ್ಘವು ಮೇ।
ಣುರುತರದುಷ್ಣದ ನಿಟ್ಟುಸುರನು ತಾ।
ನಿರದೆ ಬಿಡುತೆ ಧಾರುಣಿಯಲಿ ಬಿದ್ದನು ನಿಶ್ಚೈತನ್ಯದಲಿ॥
ತಿರೆಯಾಣ್ಮನೆ ಕೆಲವೊತ್ತಿನೊಳಾತಗೆ।
ಹರಿಯುತೆ ಮೂರ್ಛೆಯು ತಿಳಿವುಂಟಾಗಲು।
ಭರದೊಳನಂತಾನಂತಾ ಎನ್ನುತ್ತಿದ್ದನು ಶೀಘ್ರದಲಿ॥

(೬೨) ನರಪಾಲಕ ಕೇಳಾತಗನಂತನ।
ದರುಶನವಾಗುವ ಸಂಭವ ತೋರದೆ।
ಇರಲುರೆ ಚಿಂತಿಸುತಾತ್ಮ ಹತ್ಯವನೆಸಗುವದನು ಮನದೆ॥
ಭರದಲಿ ನಿಶ್ಚಯಿಸುತ್ತೊಂದಾಲದ।
ಮರಕೆ ಹಗ್ಗವನು ಕಟ್ಟುತ್ತದರಿಂ।
ದುರುಳನು ಮಾಡುತ ತನ್ನಯ ಕೊರಳಿಗೆ ಹಾಕುವನುಯದಲಿ॥

(೮೩) ಪರಮುದಯಾಳಹ ದೇವನನಂತನು ।
ಜರೆಯುಡರಿದ ವೃದಿಹಾರುವ ನಾಗುತೆ ।
ಕರುಣದೆ ಮೈದೋರುತೆ ಕೌಂಡಿಣ್ಯನೆ ಬಾರೀಕಡೆಗೆನುತೆ ॥
ಭರದಿಂದೊದರುತ್ತಾತನ ದಕ್ಷಿಣ ।
ಕರವನು ತನ್ನೆಡಗೈಯಲಿ ಹಿಡಿದಾ ।
ತುರದಲಿ ತನ್ನೊಡನೆಳದೊಯ್ದೊಂದುರು ಗವಿಯಲಿ ಹೊಕ್ಕಲ್ಲಿ ॥

(೮೪) ವರಚಲ್ವಿಕೆಯಿಂದೊಪ್ಪುವ ಸತ್ಪುರು ।
ಷರ ಸಮುದಾಯದೆ ಕೂಡಿದ ತನ್ನಾ ।
ಪುರವನ್ನದರಲಿ ಸುಂದರ ಶುಭದಾಯಕ ಸಿಂಹಾಸನದೆ ॥
ನೆರೆ ಮಂಡಿಸುತೆ ಚತುರ್ಭುಜಗಳೊಳಾಂ ।
ತಿರುವಗದಾಶಂಖಾಬ್ಜ ಚಕ್ರಗಳ ।
ಹರಿಗರುಡರು ಮುಂದಿರುವುದನಾ ಕೌಂಡಿಣ್ಯಗೆ ತೋರಿವನು ॥

(೮೫) ಕರುಣದೆ ತೋರಲನಂತನು ತನ್ನಯ ।
ತರತರವಾಗಿಹನಂತ ರೂಪವನ ।
ಪರಮಿತ ತೇಜವನತುಲೈಶ್ವರ್ಯದೊಳೊಪ್ಪುವ ಮೂರ್ತಿಯನು
ವರಕೌಸ್ತುಭಮಣಿಯಿಂದ ವಿರಾಜಿತ ।
ಕೊರಳಲಿ ವನಮಾಲಾ ಶೋಭಿತ ದೇ ।
ವರ ದೇವೇಶಾನಂತನನಪರಾಜಿತನನು ಕಂಡೊಡನೆ ॥

(೮೬) ತಾಪಸವರ್ಯನು ಜಯಜಯ ಕಾರದೊ ।
ಳಾಪುರುಷೋತ್ತಮನಂಘ್ರಿಗನಂತಗೆ ।
ತಾ ಪೊಡಮಡುತೆಂದನು ಶಿರಸಾಷ್ಟಾಂಗದೆ ನಾನತಿ ಪಾಪಿ ॥

ಪಾಪಕರ್ಮಿ ಪಾಪಾತ್ಮನು ದೇವನೆ ।
ಪಾಪದೊಳುದಿಸಿಪೆನೆನ್ನಯ ಪೂರಾ ।
ಪಾಪಗಳೆದು ಕಾಪಾಡುವದೆಲೆ ಪುಂಡರಿಕಾಕ್ಷನೆ ದಯದೆ ॥

(೮೭) ತಂದೆ ನಿನ್ನ ಪಾದಾರವಿಂದವೆ ಮಿ
ಕ್ಕಿಂದನೋಲೆನ್ನಯ ಶಿರವನ್ನಿಂದಿನ ।
ವಂದಿಸಿಟ್ಟ ಕಾರಣದಿಂದೆನ್ನಯ ಜನ್ಮಸಫಲವಾಯ್ತು ॥
ಇಂದಿನವರೆಗೆನ್ನಂಗದೊಳಸುವದು ।
ನಿಂದುದಕಾಯಿತು ಸಾರ್ಥಕವೆನಲದ ।
ಕೆಂದನನಂತನು ನಸುನಗೆಯಿಂದಾ ಭೂಸುರನೊಡನಾಗ ॥

(೮೮) ನಿನಗಿರುವಂಜಿಕೆದೊರೆದೆಲೆ ವಿಪ್ರನೆ ।
ಮನದೊಳಗುಂಟಾಗಿರುವುದನುಸುರೆನೆ ।
ಮುನಿಕೌಂಡಿಣ್ಯನು ಹೇಳಿದನೆನ್ನಿಂದಪರಾಧವಿದಾಯ್ತು ॥
ವನಿತೆ ತನ್ನೆಡದ ಕೈಯಲಿ ಕಟ್ಟಿದ ।
ಘನಮಹಿಮನನಂತನ ದಾರವನಾ ।
ಜನಿಸಿದ ಶ್ರೀಮದದಂಧತೆಯಲಿ ಬಿಡಿಸಗ್ನಿಯೊಳೊಗೆದೆನು ಹಾ॥

(೮೯) ಅದರಿಂದೊದಗಿದ ಪಾಪೋದಧಿಯಲಿ ।
ಕದಡಿಹೋಯಿತೆನ್ನ ಪಿಲ್ಪೈಶ್ವರ್ಯವು ।
ಸದನದೊಳುಂಟಾಯಿತು ತನ್ನವರಿಂದೆಡೆವಿಡದೇ ಜಗಳ ॥
ತೊದಲು ನುಡಿಯನಾದರು ಯಾರೊಬ್ಬರು ।
ಮುದದಿಂದಾಡದಿರಲು ವೈರಾಗ್ಯವ
ದೊದಗಿತರಣ್ಯಕೆ ಹೊರಟೆನು ನಿನ್ನಯದರ್ಶನದಿಚ್ಛೆಯಲಿ ॥

(೯೦) ವರ ದಯಾಳು ದೇವರ ದೇವೇಶನೆ |
ಕರೆಯುತೆ ನಿನ್ನಯ ದರ್ಶನವನು ನೀ |
ಕರುಣಿಸಿ ತೋರಿದೆ ನಿನ್ನಯ ಬಹುರೂಪಗಳನ್ನೆನಗೀಗ ॥
ಪರಮೇಶನೆ ನನಗಾ ಪಾಪವು ಪರಿ |
ಹರವಾಗುವ ಬಗೆ ಹೇಗೆನ್ನುತೆ ನೀ |
ಕರುಣದೆ ಪೇಳಲು ಯೋಗ್ಯನಿರುವಕಾರಣದಿಂದುಸುರೆನಗೆ ॥

(೯೧) ಅರುಹಿದನೀಪರಿಯಿಂದಾ ಕೃಷ್ಣನು
ಪರಮೇಶನು ಭಕ್ತಿಗೆ ಮೆಚ್ಚಿದನಾ |
ವರ ಏನಾದರು ಕೊಡಹನೆಲೆ ಪಾಂಡವ ಮುಂಗಥೆಯನು ಕೇಳು ॥
ಧರಣಿಯ ಸುರನಿಂತೆಂದುದಕಾದೇ |
ವರ ದೇವೇಶಾನಂತನು ವರಭೂ |
ಸುರ ಕೌಂಡಿಣ್ಯನ ಕುರಿತಾಸಮಯದೊಳುಸುರಿದನೀನುಡಿಯ ॥

(೯೨) ಪೊಡವಿಯಮರ ಕೌಂಡಿಣ್ಯನೆ ಬೇಗನೆ |
ತಡಮಾಡದೆ ನಿನ್ನಯ ಮನೆಗೀಕ್ಷಣ |
ನಡೆದು ಚತುರ್ದಶ ವತ್ಸರ ಪರಿಯಂತರವತಿ ಭಕ್ತಿಯಲಿ ॥
ಬಿಡದೆನಗಲನಂತನ ವ್ರತವದರಿಂ |
ವಡಗುವದೈ ನಿನ್ನಾ ಪಾಪವು ನೀ
ಕಡೆಗತಿನಿರ್ಮಲಚಿತ್ತವು ದೊರೆದುತ್ತಮ ಸಿದ್ಧಿಯ ಪಡೆವೆ ॥

(೯೩) ಪೊಡವಿಯಲ್ಲಿ ನೀ ಪುತ್ರ ಪೌತ್ರರನು |
ಪಡೆದುಣ್ಣುತೆ ಬಯಸಿದ ಬಹು ಸುಖವನು |
ಕಡೆಗವಸಾನದೊಳೆನ್ನನು ನೆನೆಯುತೆ ನಿಶ್ಚಯದಲಿ ನೀನು ॥

ಬಿಡದೆನ್ನಯ ಸಾಮಿಪ್ಯದ ಮುಕ್ತಿಯು।
ಪಡೆಯುವೆ ಬೇರಿನ್ನೊಂದು ವರವ ನಾ॥
ಕೊಡುವೆನಖಿಲ ಜನರುಪಕಾರದ ಸಲುವಾಗೀಕ್ಷಣ ಕೇಳು॥

(೯೪) ಧರೆಯಲಿ ಯಾರೀವ್ಯಾಖ್ಯಾನವನೆಂ।
ದರೆ ತೀಲೆಯನಂತನ ವ್ರತವನು ಮಾ।
ಡಿರುವುದೆ ಮೊದಲಾಗಿರುವೀಕಥೆಯನು ಕೇಳುತೆ ಭಕ್ತಿಯುಲಿ
ವರಶುಭದಾಯಕವಾದೀವ್ರತವಾ।
ಚರಿಸುವ ಜನರಾದುರಿತ ಸಮೂಹವು।
ಪರಿಹರವಾಗುತ್ತಿಹದಲಿ ಸದ್ಗತಿಯಪ್ಪುದು ಪರದಲ್ಲಿ

(೯೫) ಭರದಲಿ ವಿಪ್ರನೆ ಬಂದಿಹ ಮಾರ್ಗದೆ।
ತೆರಳೀಕ್ಷಣ ಮನೆಗೆನಲಾ ಭೂಸುರ।
ನರುಹಿದ ದೇವನೆ ನಿನ್ನನ್ನರಸುತೆ ತಿರುಗುವ ಸಮಯದಲಿ॥
ಅರಿದಸರಣ್ಯದೊಳೀಕ್ಷಿಸಿದೆ ಜಗ।
ದ್ಗುರುವೇ ನಿನ್ನನು ಕೇಳುವೆ ದಯದಿಂ।
ದರುಹುವದೆನಗಾಮಾವಿನಮರಗೋವೃಷಭಗಳೇನೆನುತೆ॥

(೯೬) ಭರದೆ ಭಯಪ್ರದವಾದ ವಿಪಿನದಲಿ।
ಇರದೆನ್ನಿಂದೇ ನೋಡಲ್ಪಟ್ಟಿಹ।
ವರಕಮಲೋತ್ಪಲ ಕಲ್ಹಾರಗಳಿಂದುರೆ ಶೋಭಿಸುವಂಥ॥
ಸರಸಿಗಳೆರಡೇನವು ಖರವಾವುದು।
ಕರಿಯೆಂಬುದೆ ಗಜವಾವುದು ಹೇಳಾ।
ಜರೆಯುಡರಿದ ವಿಪ್ರೋತ್ತಮನಾವನು ಗುಹೆಯಾವುದು ಎನುತೆ॥

(೯೭) ಅರುಹಿದನಂತನು ಕೇಳೆಲೆ ಧರಣೀ ।
ಸುರ ನೀನೀಕ್ಷಿಸಿದಾಮ್ರವು ಮೊದಲುರು ।
ತರದ ಚತುರ್ವೇದವಿಶಾರದ ಭೂಸುರನಾಗಿರಲಾಗ ॥
ಅರಿತವಿದ್ಯವನು ಶಿಷ್ಯರಿಗರುಹದೆ ।
ಮರೆಮಾಜಿದ ದುರಿತದೆ ವಿಪಿನದೆ ಮಾ ।
ಮರವಾದನು ಮರು ಭವದಲಿ ನೀನವಲೋಕಿಸಿದಾ ಗೋವು ॥

(೯೮) ಧರೆಯದು ಪೂರ್ವದ ಕಾಲದೆ ತನ್ನೊಳ ।
ಗಿರಿಸಿದ ಪರಿಪರಿಯೌಷಧಿ ಬೀಜವ
ನುರೆ ಜೀರ್ಣಿಸಿದಾ ಪಾಪದ ಫಲದಲಿ ಗೋವಾಗಿರುತಿಹುದು ॥
ಧರಣಿದೇವ ನೀ ಕಂಡಾ ವೃಷಭವು ।
ವರಧರ್ಮವು ಕೇಳಾಧರ್ಮವು ನಿಂ ।
ತಿರುವುದು ಬೆಳೆದೆಳೆವುಲ್ಲಿನ ಮಧ್ಯದೊಳಿತ್ತಿನ ರೂಪದಲಿ ॥

(೯೯) ವರಮುನಿ ಕೌಂಡಿನ್ಯನೆ ಕೇಳೆಲೆ ನೀ ।
ತಿರುಗುವಾಗ ನಿಟ್ಟಿಸಿದಾ ಸರಸಿಗ ।
ಳೆರಡವು ಧರ್ಮಾಧರ್ಮಗಳಾಜ್ಞೆಯ ತಾಣಗಳಾಗಿಹವು ॥
ಸರಸಿಗಳೆರಡವು ಪೂರ್ವಭವದೆ ಭೂ ।
ಸುರನೊಬ್ಬನ ಹೆಮ್ಮಕ್ಕಳು ತಮ್ಮೊಳ ।
ಗುರೆ ಗೆಳೆತನದಿಂದೆಸೆಯುವಕ್ಕತಂಗಿಯರಾಗಿರಲಾಗ ॥

(೧೦೦) ಪರಮ ಮೈತ್ರಿಯೊಬ್ಬರೊಳೊಬ್ಬರಿಗಿರು ।
ತಿರೆ ಧರ್ಮಾಧರ್ಮದ ಕೇಳಸನ ಗೈ ।
ದರು ಶಠತನದಿಂದೊಬ್ಬರನೊಬ್ಬರು ಬಿಡದಗಲದೆ ಸತತ ।

ವರಭೂಸುರರತಿ ಬಡವರತಿಥಿಗಳು ।
ತಿರುಕರಿವರಿಗವರಸ್ಯರಿಗೇಸಾ ।
ದರು ಭಿಕ್ಷವನಾದರು ಕೊಡಲಿಲ್ಲಕಟಕಟಕಟೊಂದಿನವೂ ॥

(೧೦೧) ಪರರಿಗೆ ದಾನವ ಕೊಡದೊಬ್ಬರಿಗೊ ।
ಬ್ಬರು ಕೊಟ್ಟಾಡಿದ ಪಾಪದ ಫಲಕೋ ।
ಸ್ಮರ ಬಿಡದೊಂವೆಡೆಯೊಳಗಿಕ್ಕಿರೆಯಾಗುತ್ತನುಗಾಲದಲಿ ॥
ತೆರೆಯುಲಿದಾಡಿ ಪರಸ್ಪರ ಕೂಡು ।
ತ್ತಿರುವುದು ಹೊರಗದರುವಕವು ಹರಿಯದು ।
ಸರಸಿಗಳವು ಭುವನದೊಳುಪಯೋಗಕೆ ಬಾರವು ನಿಜವಾಗಿ ॥

(೧೦೨) ಪರಿವಿಡಿಯುಲಿ ನೀ ನೋಡಿದ ಕತ್ತೆಯು ।
ಪರಮುಕೋಪವಾಕರಿಯುದು ಮದವುರೆ ।
ಜರೆಯುಡಸಿದ ಭೂದಿವಿಜನು ನಾನೆಂದರನಂತನು ಗವಿಯು ॥
ಧರೆಯೊಳಗಿನ ಸಂಸಾರ ರೂಪ ಗಂ ।
ಹರವಾಗಿರುವುದು ಕೇಳೆನುತಾ ದೇ ।
ವರ ದೇವೇಶನನಂತನಲ್ಲಿಯುಂತರ್ಧಾನವ ಹೊಂದೆ ॥

(೧೦೩) ಕನಸನು ಕಂಡೆಚ್ಚತ್ತೋಲಾಗಲು ।
ಮುನಿಕೌಂಡಿಣ್ಯನು ಬೇಗನೆ ತನ್ನಯ ।
ಮನೆಯನು ಸೇರಿಚತುರ್ದಶ ವತ್ಸರ ಪರಿಯಂತರ ತಾನು ॥
ಅನುಪಮ ಭಕ್ತಿಯೊಳಗನಂತನ ವ್ರತ ।
ವನು ಕ್ರಮದಿಂದ ಯಥಾವಿಧಿಯೊಳನಂ ।
ತನು ಹೇಳಿದಪೋಲ್-ತಪ್ಪದೆಸಗಿದನು ಮನುಜಾಧಿಪ ಕೇಳು ॥

(೧೦೪) ತ್ರಿಶಿಯಾಣ್ಮ್ರನೆ ನೀನಾಲಿಸನಂತನು ।
ಸುವಿದಂತಿಹ ಲೋಕದೊಳಾ ಭೂಸುರ ।
ನುರಿ ಸುಖವನು ಮಕ್ಕಳಮೊಮ್ಮಕ್ಕಳನುರೆಸಿರಿಯನು ಪಡೆದು ॥
ಚಿರಕಾಲದ ಪರಿಯಂತರ ಭೋಗಿಸಿ ।
ಮರಣದ ಕಾಲಕನಂತನ ನೆನೆಯುತೆ ।
ಪರದಲನಂತನ ಸನ್ನಿಧಿ ಸಾಯುಜ್ಯವ ಪಡೆದನು ನಿಜದೆ ॥

(೧೦೫) ಪರಮ ಭಕ್ತಿಯಲನಂತನ ವ್ರತವಾ ।
ಚರಿಸುತನಂತನ ಕಥೆಯಿದನಾಲಿಸು ।
ನರಪತಿ ನಿನಗದರಿಂದಾ ಭೂಸುರನೀರೇಳಬುದಗಳ ॥
ವರೆಗುರಿ ತಪ್ಪದನಂತನ ವ್ರತವಾ ।
ಚರಿಸುತೆ ಪಡೆದಾ ಫಲವೊಂದೇವ ।
ತ್ವರದಲಿ ದೊರೆವುದನಂತನ ಮಾತಿನವೋರೆಗೆ ನಿಜವಾಗಿ ॥

(೧೦೬) ಧರೆಯಲ್ಲಿಹ ವ್ರತಗಳಲತ್ಯುತ್ತಮ ।
ವಿರುವ ವ್ರತವ ನಿನಗರುಹಿದೆನೆಲೆ ಭೂ ।
ವರನೇ ಈವ್ರತವೆಸಗುತ್ತೀಕಥೆಯನು ಕೇಳುವ ಜನರಾ ॥
ದುರಿತಸಮೂಹವು ನಾಶನವಾಗುತೆ ।
ಪರಮುಕ್ತಿಯು ನಿಶ್ಚಯದಿಂದವರಿಗೆ ।
ದೊರೆವುದು ಹೆಚ್ಚಿಗೆ ಹೇಳುವದೇತಕೆ ಧಿಟವೀನುಡಿನಂಬು ॥

(೧೦೭) ಧರೆಯಲಿ ಯಾರೀ ಕಥೆಯನ್ನಾಲಿಸು ।
ವರೊ ಮತ್ತಿದನುಸುರುವರೊ ನಿರಂತರ ।
ಹರುಷದೊಳಿದನುರೆ ಬರೆದೀಯುವರವರೆಲ್ಲರ ದುರಿತಗಳು ॥

ಪರಿಹರವಾಗುತವರು ವೈಕುಂಠಕೆ ।
ತೆರಳುವರಂತ್ಯದೆ ನಿಶ್ಚಯದಲಿ ಭೂ॥
ಪರ ಕೇಳೆನುತಾ ಶ್ರೀಕೃಷ್ಣನು ಹೇಳುತ್ತುಸುರಿದನಿಂತು ॥

(೧೦೮) ಪರಮ ಭಯಂಕರವಹ ಗಂಹರವಂ ।
ತಿರುವೀ ಸಂಸಾರವೆ ಸುಖದಲಿ ಸಂ।
ಚರಿಸುವ ಮನಸಿರುವವರಂತಃಕರಣವು ನಿರ್ಮಲವಾಗಿ ॥
ಇರುವವರೀತ್ರೈಲೋಕೇಶ್ವರ ನಾ ।
ಗಿರುವನಂತದೇವೇಶನ ಪೂಜಿಸಿ।
ವರದಸು ದಾರವ ತಮ್ಮಯ ಕರದಲಿ ಕಟ್ಟುವದೆಲೆನೃಪನೆ॥

(೧೦೯) ಉರಗಾರಿಯ ವಾಹನನೀ ಪರಿಯಲಿ ।
ಕರಿಪುರದರಸನಿಗೆಂದುದ ನೈಮಿಷ।
ಗಿರಿವಾಸಿಗಳಾಗಿಹ ಶೌನಕ ಮೊದಲಾದವರಿಗೆ ಸೂತ ॥
ಅರುಹಿದನಂತನ ಕಥೆ ಸಂಸ್ಕೃತದಲಿ।
ಇರಲದು ಗುರು ಕರುಣದೆ ಕನ್ನಡದಲಿ।
ವಿರಚಿತವಾದುದು ಕರ್ನಾಟಕದ ಕನ್ನಡಿಗರ ಸಲುವಾಗಿ ॥

(೧೧೦) ಪರಿವರ್ಧಿಸಿ ಷಟ್ಪದಿಯಲಿ ಭಾಷಾಂ।
ತರಿಸಿದನುರೆ ಶಾಲೀವಾಹನಶಕ।
ದರಿತಿಖಿವಸುಭೂ ಪರಿಮಿತದಾನಂದ ಸನಾಮಾಬ್ದದಲಿ ॥
ಪರಿವಾಸದೆ ಸಿತ ಪಕ್ಷಚತುರ್ದಶಿ।
ಗುರುವಾಸರದೆ ಕಡೇಕೋಡಿಯ ಭೂ।
ಸುರ ಪರಮಯ್ಯಹೆಗಡೆ ಮಗನಹ ವೆಂಕಪ್ಪನು ಬುಧರರಿಯೆ ॥

(೧೧೧) ತುರುಕರುಗಳ್ಮಿಗೆ ಪೆರ್ಚುತೆಕೊಡವಾ।
ಲ್ಗರೆಯಲಿ ಮಳೆಯು ಸಕಾಲದೆ ಸುರಿಯಲಿ।
ನಿರುತಂ ಚಾತುರ್ವರ್ಣದವರ್ತ್ತಂತಮ್ಮಯ ಧರ್ಮದಲಿ॥
ನಿರತರಾಗಿರಲಿ ಬರವಡಗಲಿ ಧರೆ।
ಯುರೆ ಬೆಳೆಯಲಿ ಕರ್ಣಾಡೊಳುನವರಸ॥
ಭರಿತಸುಕಾವ್ಯಗಳಾಗಲಿ ಸತ್ಕವಿನಿಕರಗಳುದಯಿಸಲಿ॥

॥ ಆರತಿ ॥

ರಾಗ ಸುರಟಿ॥ ಆದಿತಾಳ॥

ಎತ್ತುವರಾರತಿಯಾ। ಸಂತನಿ। ಗೆತ್ತುವರಾರತಿಯಾ॥ಪಲ್ಲ॥
ಹತ್ತವತಾರವನೆತ್ತಿದನಂತನ। ಉತ್ತಮಾಂಘ್ರಿಯುಪ್ರಸಾದಕೆ
ಬನ್ನಿರಿ॥ ಎತ್ತುವ ಅನುಪಲ್ಲ॥
ಭೃಗುಮುನಿ ಶಾಪವಲಿ॥ಜಗದೊಳ॥ ಗೊಗುಮಿಗೆ ಹರುಷವಲಿ।
ಬಗೆಬಗೆ ರೂಪವ ಧರಿಸುತೆ ಭಕ್ತರಿ। ಗಗಣಿತಮಹಿಮೆಯ।
ತೋರಿದನಂತನಿ॥ ಗೆತ್ತುವರಾರತಿಯ॥೧॥
ಉತ್ತಮವೇದವನು॥ಸೋಮಕ॥ ನೆತ್ತಿಡಗಿರಲವನು।
ಒತ್ತರದಿಂದೈಪುತ್ತ್ರಜನಿಗೆ ತಂ।
ದಿತ್ತಿಹ ಮತ್ಸ್ಯಾಕಾರದನಂತನಿ॥ ಗೆತ್ತುವರಾರತಿಯ॥೨॥
ಶರಧಿಯ ಮಥನದಲಿ॥ ಮಂದರ॥ ಗಿರಿಯಾಶರಧಿಯಲಿ।
ಭರದೆ ಮುಳುಗಲದನೀಕ್ಷಿಸಿ ಬೆನ್ನೊಳು।
ಧರಿಸಿದ ಕೂರ್ಮಾಕಾರದನಂತನಿ॥ ಗೆತ್ತುವರಾರತಿಯ॥೩॥

ಧರಣಿಯ ಸಾರವನು॥ ಕದ್ದು ಕೆ॥ ಸರೊಳಡಗಿರಲದನು।
ಅರಿತುದ್ಧರಿಸಿಳೆಯನು ಹೇಮಾಕ್ಷನ
ಸೀಳಿದವರಾಹಾಕಾರದನಂತನಿ॥ ಗೆತ್ತುವರಾರತಿಯ ॥೪॥
ವರಗರ್ವದಿ ಖಳನು। ಜರೆಯು॥ ತ್ತಿರಲವನರ್ಭಕನು।
ಮೊರೆಯಿಡಲಾಲಿಸಿ ಹೇಮಾಂಗನ ಸಂ।
ಹರಿಸಿದ ನರಹರಿ ರೂಪದನಂತನಿ॥ ಗೆತ್ತುವರಾರತಿಯಾ ॥೫॥
ಕಲಿಗಟ್ಟಳೆಯನ್ನಾ। ಆಳುವ॥ ಬಲಿಯಲಿ ದಾನವನು।
ಸಲೆಬೇಡುತ್ತಿಳೆಯೆಲ್ಲವ ಮೂರಡಿ।
ಗಳೆದ ವಾಮನಾಕಾರದನಂತನಿ। ಗೆತ್ತುವರಾರತಿಯ ॥೬॥
ಕೊಡಲಿಯಾಂತು ಕರದೆ॥ ದುಷ್ಟರ॥ ಮಡುಹಿನೃಪರ ಮುದದೆ।
ಮಡಿದಾ ಜನನೀಜನಕರ ಜೀವವ
ಪಡೆದಪರಶುಧರ ರಾಮನನಂತನಿ। ಗೆತ್ತುವರಾರತಿಯ ॥೭॥
ಭೃಗುಮುನಿ ಶಾಪದಲಿ॥ ಮಡದಿಯ॥ ನಗಲುತ್ತೆ ಲೋಕದಲಿ।
ವಿಗತ ರಾವಣಾದಿಗಳನು ಮಡುಹಿದ।
ರಘುಪತಿ ದಶರಥರಾಮನನಂತನಿ॥ ಗೆತ್ತುವರಾರತಿಯ ॥೮॥
ಯದುಕುಲದಲ್ಲುದಿಸಿ॥ ದುಷ್ಟರ॥ ಮುದದಲಿ ಸಂಹರಿಸಿ।
ಚದುರತನದೆ ಶಿಷ್ಟರ ಪಾಲಿಸಿ ಬಹು।
ಸುದತಿಯರಾಳಿದ ಕೃಷ್ಣಾನಂತನಿ॥ ಗೆತ್ತುವರಾರತಿಯ ॥೯॥
ಸತಿಯರ ವ್ರತದಿಂದಾ॥ ಪುರಹರ॥ ಧೃತಿಗೆಡಲದರಿಂದ।
ಯತಿರೂಪದೊಳಾ ಸತಿಯರ ವ್ರತಗೆಡಿ।
ಸುತಿ ಪತಗೆಯ್ದಿದ ಬೌದ್ಧಾನಂತನಿ॥ ಗೆತ್ತುವರಾರತಿಯ ॥೧೦॥
ಕಲಿಗತ್ತಾಚಾರಾ॥ ಜಗದಲಿ॥ ನೆಲಸಲನಾಚಾರ।

ಸಲಿ ಭೂಸುರನಾಗುತ ಹಯವೇರುತ।
ಕಲಿಗಲಿಯಾದಾಕಲ್ಯಾಣನಂತನಿ ॥ ಗೆತ್ತುವರಾರತಿಯು ॥೧೧॥
ದೇವರ ದೇವನಿಗೆ ॥ ಭಕ್ತರ ॥ ಕಾವಗೆ ಗುಣನಿಧಿಗೆ।
ಪಾವನಚರಣಗೆ ಶರಣೋದ್ಧಾರಗೆ।
ಭಾವಜಪಿತಸುರವಂದ್ಯಗನಂತನಿ ॥ ಗೆತ್ತುವರಾರತಿಯು ॥ ೧೨॥
ವರಪುರುಷೋತ್ತಮಗೆ ॥ ಪರಿಪರಿ ॥ ದುರಿತವಿದೂರನಿಗೆ।
ಧರಣೀಸುರಕೌಂಡಿಣ್ಯನಘವಪರಿ।
ಹರಿಸಿದನಂತಗೆ ವಿಶ್ವರೂಪನಿಗೆ ॥ ಯೆತ್ತುವರಾರತಿಯು ॥೧೩॥
ವಾಸವ ಪೂಜಿತಗೆ ॥ ಹಾವಿನ ॥ ಹಾಸಿನೊಳೊರಗಿದಗೆ।
ಭೂಸುರ ಪಾಲಿತ ವಾಸುದೇವನಿಗೆ।
ಸಾಸಿರನಾಮದೊಳೊಪ್ಪವನಂತನಿ । ಗೆತ್ತುವರಾರತಿಯು ॥೧೪॥
ಕಂಜದಳಾಕ್ಷನಿಗೆ । ದಾನವ ॥ ಭಂಜಕನೆನಿಸಿದಗೆ।
ರಂಜಿತ ಕಂಜಸಖೋಪಮ ತೇಜಗೆ।
ಕುಂಜವರದಾಕಂಜನಾಭನಿಗೆ । ಯೆತ್ತುವರಾರತಿಯಾ ॥೧೫॥
ಪರಮೇಶ್ವರನಿಂದ ॥ ಜನಿಸಿದ ॥ ಗುರುವೆಂಕಟನಿಂದ।
ವಿರಚಿತವಾದೀ ಯಾರತಿ ಪದವತಿ।
ಹರುಷದಿ ಸತಿಯರು ಪಾಡಲನಂತನಿ।
ಗೆತ್ತಿದರಾರತಿಯಾ ॥ ಅನಂತನಿ ॥ ಗೆತ್ತಿದರಾರತಿಯಾ ॥
ಪತ್ತವತಾರಪನೆತ್ತಿದನಂತನ।
ಉತ್ತಮಾಂಘ್ರಿಯ ಪ್ರಸಾದಕೆಬನ್ನಿರಿ ॥ ಯೆತ್ತಿದರಾರತಿಯಾ॥೧೬॥

ರಾಗ ॥ ತ್ರಿಪುಡೆ ।

ಮಂಗಳಂ ಜಯ ಮತ್ಸ್ಯಕೂರ್ಮಗೆ|ಜಯವರಾಹಗೆ ಮಂಗಳಂ ।
ಮಂಗಳಂ ನರಹರಿಗೆವಾಮನ| ಪರಶುರಾಮಗೆ ಮಂಗಳಂ|೧|
ಮಂಗಳಂ ರಾಮನಿಗೆ ಕೃಷ್ಣಗೆ |ಬೌದ್ಧಕಲ್ಕ್ಯಗೆ ಮಂಗಳಂ ||
ಮಂಗಳಂ ನಾನಾವತಾರಗೆ । ಭಜಕಪೋಷಗೆ ಮಂಗಳಂ |೨|
ಮಂಗಳಂ ಜಗದೀಶ ದೇಸೋ । ದ್ಧಾರದೇವಗೆ ಮಂಗಳಂ ॥
ಮಂಗಳಂ ಜಯ ವೆಂಕಟೇಶಗೆ| ಶ್ರೀನಿವಾಸಗೆ ಮಂಗಳಂ ।೩

ರಾಗ ॥ ಮಧ್ಯಮಾವತಿ । ತ್ರಿಪುಡೆ ।

ಮಂಗಳಂ ಸಿರಿಯಾಳ್ವದೇವಗ ॥ನಂಗಪಿತನಿಗೆ ಮಂಗಳಂಜಯ ॥
ಮಂಗಳಂ ಕರುಣಾಸಮುದ್ರಗೆ। ಭಂಗರಹಿತಗೆ ಮಂಗಳಂ ॥೧॥
ಕಂತುಪಿತನಿಗೆ ಮಂಗಳಂ ಜಯ। ಅಂತರಾತ್ಮಗೆ ಮಂಗಳಂಜಯ
ಸಂತತಂ ಗೋಪಾಲಕೃಷ್ಣಗ। ಸಂತಮಹಿಮಗೆ ಮಂಗಳಂ ।೨॥
ಮಂಗಳಂ ಜಯ ಮಂಗಳಂ ಶುಭ।
ಮಂಗಳಂ ಜಯ ಜಯತು ಕರುಣದ |
ಸಂಗಮೂರುತಿಯಖಿಲ ಭವಭಯ| ಭಂಗವೆಂಕಟರಮಣಗೆ||೩|
ಜಯತು ಜಯಜಯ ವಿಜಯಮಿತ್ರನೆ ।
ಜಯತು ಜಯಜಯ ಗರುಡಗಮನನೆ ||
ಜಯತು ಜಯಜಯ ಶೇಷಶಯನನೆ ॥
ಜಯತು ವೆಂಕಟರಮಣನೆ ॥೪॥

ಭದ್ರಂ ಶುಭಂ ಮಂಗಳಂ ।

ದ್ವಿತಿಯ ಮಣಿ ಸಂಪೂರ್ಣಂ

ಒಪ್ಪೋಲೆ

ಪುಟ.	ಪದ್ಯ.	ಪಂಗ್ತಿ.	ತಪ್ಪು.	ಒಪ್ಪು.
೯	೧೮	೭	ಕುಲ್ಲದೆ	ಕುಲದೆ
೨೦	೫೫	೭	ವಾಕ್ಷದಲಿ	ವಾಕ್ಷಣದಲಿ
೨೨	೭೪	೬	ಕಾರೆಣ	ಕಾರಣ
೨೪	೭೨	೨	ನಸು	ಸಸು
೩೦	೯೦	೩	ಉಪಗಳನ್ನಿಗಗೀಗೆ	ರೂಪಗಳನ್ನಿ
೩೫	೧೧೦	೩	ಪರಿತಿಬಿ	ದರಿಶಿಪಿ

ವಿಜ್ಞಾಪನ

ವಾ॥ಷ॥ ಸಿರಿವಂತ ಧೀಮಂತರಹಬಂಧುಭಗಿನಿಯರ !
ಚರಣಾರವಿಂದಯುಗಳದೊಳು ಸಾಷ್ಟಾಂಗದಿಂ
ಶಿರನಾಗಿ ಕರ್ಣಾಟಕಸುಕಾವ್ಯರತ್ನಮಾಲಾ ದ್ವಿತಿಯಮಣಿಯಾಗಿಹ ॥
ಮೆರೆವ ಶ್ರೀಮದನಂತ ಪದ್ಮನಾಭನಕಥೆಯ ।
ನಿರಿಸಿಹೆಸಿವಂ ಸ್ವೀಕರಿಸಿ ಮಮತೆಯಿಂದಿಸುತವ ।
ಧರಿಸುತವಲೋಕಿಸುತೆ ತಮ್ಮಸದಭಿಪ್ರಾಯಮಂ ವ್ಯಕ್ತಗೊಳಿಸುತ್ತೈದೆ ।
ಕರುಣದಿಂ ಭಾಷಾಭಿಮಾನದಿಂ ಪ್ರೋತ್ಸಾಹಿ ।
ಸಿರಿ ಪರಶುರಾಮರಾಮಾಯಣದೊಳುಳಿದುದಂ ।
ಭರದಿಂ ಪ್ರಚುರಪಡಿಸುವಂತುದಾರಾಶ್ರಯವನಿತ್ತು ರಕ್ಷಿಸಿರೆನ್ನುತೆ
ಬರಕೊಂಡಮಿತಿ ಶಾಲಿವಾಹನಶಕದೆ ಪಂಚ ।
ಶರಧಿವಸು ಭೂಮಿ ರುಧಿರೋದ್ಗಾರಿನಾಮವ ।
ತ್ಸರ ಶರತ್ಕಾಲದಾಶ್ವೀನಮಾಸದ ಶುದ್ಧ ಪಕ್ಷನು ಭಾರ್ಗವ ವಾಸರ ॥೨॥

(ಕಂದ)

ದಾರಿಯೊಳೋಡುವಮನುಜಂ । ಪಾದದೆಬೀಳ್ವಂತೆದೋಷಮೊದಗಿದರಿದರಿ
ತೋರಿಸಿದರೆ ಬುಧರಿದನುವಿ । ಚಾರಿಸಿತಿದ್ದುತ್ತೆ ನೆನೆವೆನುಪಕೃತಿಯಂ

ವಿದ್ವಜ್ಜನ ನಿಧೇಯ,
ಪರಮಯ್ಯ ಹೆಗ್ಗಡೆ ಕಡೇಕೊ

ಸಾಭಾರ ಸ್ವೀಕಾರ.

ಅತ್ಯುತ್ತಮ ವರ್ಗದ ಕನ್ನಡ ವಾರ ಪತ್ರಿಕೆಗಳು.

(೧) **ಕರ್ನಾಟಕ ವೈಭವ.** ವಿಜಾಪುರ. ವಾ. ಚ. ರೂ ೪—೦—೦
(೨) **ನವೀನ ಭಾರತ.** ಬಾಗಲಕೋಟೆ. " " " ೨—೮—೦
(೩) **ಕಾನಡಾ ವೃತ್ತ.** ಕುಮಟಾ. " " " " ೩—೦—೦
(೪) **ಕಾನಡಾ ಧುರೀಣ.** ಕುಮಟಾ. " " " ೩—೦—೦
(೫) **ಸಾಧ್ವಿ.** ಮೈಸೂರು. " " " " " " ೩—೦—೦

ತಿಳಿ ಕನ್ನಡ ಶ್ರೇಷ್ಠ ವರ್ಗದ ಮಾಸ ಪತ್ರಿಕೆಗಳು.

(೧) **ಸಚಿತ್ರ ಜಯ ಕರ್ನಾಟಕ.** ಸಾಧನ ಕೇರಿ ಧಾರವಾಡ
... ... ವಾ. ಚ. ರೂ ೫—೮—೦
(೨) **ಅಧ್ಯಾತ್ಮ ಪ್ರಕಾಶ.** ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
೨ ನೇ ಬೀದಿ ಚಾಮರಾಜಪೇಟೆ ಬೆಂಗಳೂರ ಸಿಟಿ. " " " ೩—೦—೦
(೩) **ಸಾಧನ** ಶಿರ್ಸಿ. ಉತ್ತರ ಕನ್ನಡ. " " " " ೨—೦—೦
ಇವಲ್ಲದೆ ಕೇಶವ ದಾಸರ ಕೀರ್ತನೆಗಳು. ಭಾಗ ೧ ಬೆಲೆ ... ೦—೪—೦
" " " " " " " ಭಾಗ ೨ ಬೆಲೆ ... ೦—೨—೦
ಕೇಶವದಾಸ ಮಂದಿರ ಶಿರ್ಸಿ ಉತ್ತರ ಕನ್ನಡ

Printed at the Bharati Printing Press Honavar.
&
Published By Kadekodi Bros
At the Karnatak Sukavyaratnagar.
Dhareshwar.(Kumta)